# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ಸಂಪಾದಕರು : ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಭಾನುವಾರ, ಜುಲೈ 31, 2022

ಸಂಪುಟ : 49  ಸಂಚಿಕೆ : 78  ☎ 254736  91642 99999  RNI No: 27369/75  KA/SK/CTA-275/2021-2023. O/P @ B.V. Nagar P.O.  ಪುಟ : 6  ರೂ : 5.00  www.janathavani.com  janathavani@mac.com


# ಪ್ರಾಣ ಕೊಟ್ಟೇವು ಭೂಮಿ ಕೊಡೆವು

## ಇಂಡಸ್ಟ್ರೀಯಲ್ ಕಾರಿಡಾರ್ ನಿರ್ಮಾಣಕ್ಕೆ ಮೆಳ್ಳೇಕಟ್ಟೆ, ಅಣಜಿ, ಲಿಂಗಾಪುರದ 1156 ಎಕರೆ ಫಲವತ್ತಾದ ಭೂಮಿ ಸ್ವಾಧೀನಕ್ಕೆ ನಿರ್ಧಾರ

ದಾವಣಗೆರೆ, ಜು. 30- ಇಂಡಸ್ಟ್ರೀಯಲ್ ಕಾರಿಡಾರ್ ನಿರ್ಮಾಣ ಯೋಜನೆಗೆ 1156 ಎಕರೆ ಕೃಷಿ ಭೂಮಿಯನ್ನು ಭೂ ಸ್ವಾಧೀನ ಪಡಿಸಿಕೊಳ್ಳುವುದಾಗಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ವಿಶೇಷ ಭೂ ಸ್ವಾಧೀನಾಧಿಕಾರಿಗಳು ಕಳುಹಿಸಿರುವ ನೋಟಿಸ್‌ಗೆ ರೈತರು ಬೆಚ್ಚಿ ಬಿದ್ದಿದ್ದಾರೆ. ಅಷ್ಟೇ ಅಲ್ಲ, ಕೆಲವರು ಮಾನಸಿಕ ಆಘಾತಕ್ಕೂ ಒಳಗಾಗಿದ್ದಾರೆ.

**ದಿಢೀರನೆ ಬಂದ ನೋಟಿಸ್‌ಗೆ ಆಘಾತಗೊಂಡ ರೈತರು**

**ಹೋರಾಟಕ್ಕೆ ನಿರ್ಧಾರ**

ದಾವಣಗೆರೆ ತಾಲ್ಲೂಕಿನ ಮೆಳ್ಳೇಕಟ್ಟೆ, ಅಣಜಿ ಹಾಗೂ ಲಿಂಗಾಪುರ ಗ್ರಾಮಗಳಲ್ಲಿ ಇಂಡಸ್ಟ್ರೀಯ್ ಕಾರಿಡಾರ್ ನಿರ್ಮಾಣ ಮಾಡುವ ಉದ್ದೇಶಕ್ಕಾಗಿ ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಯು 1156 ಎಕರೆ ಭೂ ಸ್ವಾಧೀನ ಪಡಿಸಿಕೊಳ್ಳಲು ಮುಂದಾಗಿದೆ. ಈ ಸಂಬಂಧ ಕಳೆದ ವಾರವಷ್ಟೇ ಸುಮಾರು 258 ರೈತರಿಗೆ ನೋಟಿಸ್ ಕಳುಹಿಸಲಾಗಿದೆ. ದಿಢೀರ್ ನೋಟಿಸ್ ನೋಡಿದ ರೈತರು ಇದೀಗ ಸಂಕಷ್ಟಕ್ಕೊಳಗಾಗಿದ್ದಾರೆ. ಸರ್ಕಾರ ಹಾಗೂ (5ನೇ ಪುಟಕ್ಕೆ)

### ಮಾನಸಿಕ ಆಘಾತ

**ಜಮೀನು ಸ್ವಾಧೀನಕ್ಕೆ ಸಂಬಂಧಿಸಿದಂತೆ ಏಕಾಏಕಿ ನೋಟಿಸ್ ಕಂಡು ಮೆಳ್ಳೇಕಟ್ಟೆ ಗ್ರಾಮದ ಜನರು ಬೆಚ್ಚಿದ್ದಾರೆ. ಫಲಕ್ಕೆ ಬಂದ ಅಡಿಕೆ ತೋಟವುಳ್ಳ 8-10 ಜನ ರೈತರು ಮಾನಸಿಕವಾಗಿಯೂ ಆಘಾತಗೊಂಡಿದ್ದಾರೆ. ಯಾವ ಕಾರಣಕ್ಕೂ ಫಲವತ್ತಾದ ಜಮೀನನ್ನು ಬಿಟ್ಟುಕೊಡುವುದಿಲ್ಲ. ಉಗ್ರ ಹೋರಾಟ ನಡೆಸುತ್ತೇವೆ ಎಂದು ಮೆಳ್ಳೇಕಟ್ಟೆ ಜಿ.ಎಂ. ನಾಗೇಂದ್ರಪ್ಪ, ಎ.ಹೆಚ್. ಚಂದ್ರಶೇಖರಪ್ಪ, ಜಿ.ಬಿ. ಸಿದ್ದಪ್ಪ, ಡಿ.ಸಿ. ರೇವಣಸಿದ್ದಪ್ಪ ತಿಳಿಸಿದ್ದಾರೆ.**

### ತರಳಬಾಳು ಶ್ರೀಗಳಿಗೆ ಮೊರೆ

**ಭೂ ಸ್ವಾಧೀನಕ್ಕೆ ಬೆಚ್ಚಿರುವ ರೈತರು ಕಳೆದ ಗುರುವಾರ ತರಳಬಾಳು ಜಗದ್ಗುರುಗಳನ್ನು ಭೇಟಿ ಮಾಡಿ ಅಳಲು ತೋಡಿಕೊಂಡಿದ್ದಾರೆ. ಬರುವ ಸೋಮವಾರ ಈ ಕುರಿತು ರೈತರ ಸಭೆ ಕರೆಯುವುದಾಗಿ ಶ್ರೀಗಳು ಭರವಸೆ ನೀಡಿದ್ದಾರೆ ಎನ್ನಲಾಗಿದೆ.**

# ಸೆಪ್ಟೆಂಬರ್‌ಗೆ ಟಿವಿ ಸ್ಟೇಷನ್ ಕೆರೆ ಕಾಮಗಾರಿ ಪೂರ್ಣ

ದಾವಣಗೆರೆ, ಜು.30- ನಗರದ ಸಾರ್ವಜನಿಕರಿಗೆ ಕುಡಿಯುವ ನೀರಿಗೆ ಆಸರೆಯಾಗಿರುವ ಟಿ.ವಿ. ಸ್ಟೇಷನ್ ಕೆರೆಯ ಕಾಮಗಾರಿ ಯನ್ನು ಸಂಸದ ಜಿ.ಎಂ ಸಿದ್ದೇಶ್ವರ ಅವರು ಜಿಲ್ಲಾಧಿಕಾರಿಗಳು ಹಾಗೂ ಜನಪ್ರತಿನಿಧಿಗಳೊಂದಿಗೆ ಪರಿಶೀಲಿಸಿದರು.

ಕಾಮಗಾರಿ ಪರಿಶೀಲನೆಯ ನಂತರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಈ ಕೆರೆಯನ್ನು ಬಹಳ ವರ್ಷಗಳಿಂದ ಸ್ವಚ್ಛ ಮಾಡಲಾಗಿಲ್ಲ. ಹಾಗಾಗಿ ಕೆರೆಯ ಪುನಶ್ಚೇತನ ಹಾಗೂ ಶುದ್ಧೀಕರಣಕ್ಕಾಗಿ ಸರ್ಕಾರ 2.75 ಕೋಟಿ ಹಣ ಮಂಜೂರು ಮಾಡಿದೆ. ಟೆಂಡರ್ ಪ್ರ ಕ್ರಿ ಯೆ (5ನೇ ಪುಟಕ್ಕೆ)

# ಸಿಇಟಿ ಫಲಿತಾಂಶ ಪ್ರಕಟ : 1.71 ಲಕ್ಷ ವಿದ್ಯಾರ್ಥಿಗಳಿಗೆ ರ್‍ಯಾಂಕಿಂಗ್

ಬೆಂಗಳೂರು, ಜು.30 - ವೃತ್ತಿಪರ ಕೋರ್ಸ್‌ಗಳ ಪ್ರವೇಶ ಪರೀಕ್ಷೆಯಲ್ಲಿ (ಸಿಇಟಿ) ಬಾಲಕಿ ಯರು ಮೇಲುಗೈ ಸಾಧಿಸಿದ್ದಾರೆ. ಒಟ್ಟು 83 ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳು, 88 ಸಾವಿರಕ್ಕೂ ಅಧಿಕ ವಿದ್ಯಾರ್ಥಿನಿಯರು ಈ ಬಾರಿ ಸಿಇಟಿ ಫಲಿತಾಂಶದಲ್ಲಿ ತೇರ್ಗಡೆ ಹೊಂದಿದ್ದಾರೆ.

ಕೇಂದ್ರ ಸ್ವಾಮ್ಯದ ಸಿಬಿಎಸ್‌ಇ ವಿದ್ಯಾರ್ಥಿಗಳು ಐದು ವಿಭಾಗಗಳಲ್ಲೂ ರ್‍ಯಾಂಕ್‌ಗಳನ್ನು ದೋಚಿಕೊಂಡಿದ್ದಾರೆ.

ಐದು ವಿಭಾಗ (5ನೇ ಪುಟಕ್ಕೆ)










# ಜನಪರ ಚಿಂತನೆಯ ಸಿರಿಗೆರೆ ಶ್ರೀಗಳು



## ರಾಣೇಬೆನ್ನೂರಿನ ಕಾರ್ಯಕ್ರಮದಲ್ಲಿ ಶಾಸಕ ಅರುಣಕುಮಾರ

ರಾಣೇಬೆನ್ನೂರು, ಜು. 30- ಸರ್ಕಾರ ಹಾಗೂ ರಾಜಕಾರಣಿಗಳಿಗಿಂತಲೂ ಹೆಚ್ಚು ಜನಪರ ಕೆಲಸಗಳು, ಅದರಲ್ಲೂ ರೈತಪರ ಧ್ವನಿ ಎತ್ತುವ ಚಿಂತನೆ ಸಿರಿಗೆರೆ ಡಾ. ಶಿವಮೂರ್ತಿ ಶ್ರೀ ಗಳಲ್ಲಿದೆ ಎಂದು ಶಾಸಕ ಅರುಣಕುಮಾರ ಪೂಜಾರ ಅವರು ಚಳಗೇರಿಯಲ್ಲಿ ನಡೆದ ಸಮುದಾಯ ಭವನದ ಉದ್ಘಾಟನಾ ಸಮಾರಂಭದಲ್ಲಿ ಹೇಳಿದರು.

ಹಗಲಿರುಳು ರೈತರ ಹಿತಾಸಕ್ತಿಯ ಮಂತ್ರ ಜಪಿಸುವ ಹಿಂದಿನ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಸಹಕಾರದಿಂದ ಬರದ ನಾಡಿನಲ್ಲಿ ನೀರು ಹರಿಸಿ ಹಸಿರುಗೊಳಿಸಿ ಅಲ್ಲಿನ ಜನರ ಬದುಕನ್ನು ಹಸನುಗೊಳಿಸುವಲ್ಲಿ ಸಿರಿಗೆರೆ ಜಗದ್ಗುರುಗಳ ಪ್ರಯತ್ನವಿದೆ ಎಂದು ಶಾಸಕರು ವಿವರಿಸಿದರು.

ಎಲ್ಲಾ ಜನರ ಜೊತೆ ಒಂದಾಗಿ ಬದುಕು ನಡೆಸುತ್ತಿರುವ ಮರಾಠ ಸಮಾಜದ ತುಕ್ಕಾಭವಾನಿ ದೇವಸ್ಥಾನದ ಈ ಜಾಗೆಯಲ್ಲಿ ನನ್ನ ಅನುದಾನದಲ್ಲಿ 37 ಲಕ್ಷ ರೂ. ವೆಚ್ಚದಲ್ಲಿ ಕಟ್ಟುವ ಸಮುದಾಯ ಭವನವನ್ನು ನಾನೇ ಉದ್ಘಾಟನೆ ಮಾಡುತ್ತೇನೆ ಎಂದು ಶಂಕುಸ್ಥಾಪನೆ ಸಂದರ್ಭದಲ್ಲಿ ಹೇಳಿದಂತೆ ಇಂದು ನಡೆದಿದೆ ಎಂದರು. ದೇವಸ್ಥಾನ ಸಮಿತಿಯ ಅಧ್ಯಕ್ಷ ಮಾರುತೆಪ್ಪ ಬೋಂಸ್ಲೆ ಮಾತನಾಡಿ, ದೇವಸ್ಥಾನ ಹಾಗೂ ಸಮುದಾಯ ಭವನದ ನಿರ್ಮಾಣದಲ್ಲಿ ಸಹಾಯ ಸಹಕಾರ ನೀಡಿದ ಹಿಂದಿನ ಹಾಗೂ ಈಗಿನ ಶಾಸಕರ ಹಾಗೂ ಶ್ರಮಿಸಿದ ಸಮಾಜ ಬಾಂಧವರ ಪ್ರಯತ್ನವನ್ನು ವಿವರಿಸಿದರು. ಮರಾಠ ಸಮಾಜದ ಅಧ್ಯಕ್ಷೆ ನಾಗವೇಣಿ ಪವಾರ, ತಾಲ್ಲೂಕು ಅಧ್ಯಕ್ಷ ಪವಿತ್ರಕುಮಾರ ನಾಗೇನಹಳ್ಳಿ ವೇದಿಕೆಯಲ್ಲಿದ್ದರು.

# ರಾಜೀನಾಮೆ ಕೊಟ್ಟಾಕ್ಷಣ ಪಕ್ಷ ಮುಳುಗಿ ಹೋಗಲ್ಲ



ದಾವಣಗೆರೆ, ಜು. 30- ರಾಜೀನಾಮೆ ಕೊಟ್ಟಾಕ್ಷಣ ಪಕ್ಷ ಮುಳುಗಿ ಹೋಗಲ್ಲ ಎಂದು ಸಂಸದ ಜಿ.ಎಂ. ಸಿದ್ದೇಶ್ವರ ಹೇಳಿದ್ದಾರೆ. ಬಿಜೆಪಿ ಕಾರ್ಯಕರ್ತ ಪ್ರವೀಣ್ ನೆಟ್ಟಾರು ಹತ್ಯೆಯಿಂದ ರೊಚ್ಚಿಗೆದ್ದು ಬಿಜೆಪಿ ಯುವ ಮೋರ್ಚಾ ಕಾರ್ಯಕರ್ತರು ರಾಜೀನಾಮೆ ನೀಡುತ್ತಿರುವ ಬಗ್ಗೆ ಕೇಳಲಾದ ಪ್ರಶ್ನೆಗೆ ಸಂಸದರು ಮೇಲಿನಂತೆ ಪ್ರತಿಕ್ರಿಯಿಸಿದ್ದಾರೆ. ಬಿಜೆಪಿ ಇದು 11 ಕೋಟಿ ಕಾರ್ಯಕರ್ತರನ್ನು ಹೊಂದಿರುವ ಪಕ್ಷ.

ಅವರ್‍ಯಾರು ಪಕ್ಷಕ್ಕೆ ರಾಜೀನಾಮೆ ನೀಡಿಲ್ಲ. ರಾಜೀನಾಮೆ ಕೊಡುವ ಮುನ್ನ ನಮ್ಮ ಜಿಲ್ಲಾಧ್ಯಕ್ಷರು, ಶಾಸಕರು, ಇಲ್ಲವೇ ನಮ್ಮ ಜೊತೆಗೆ ಅವರು ಮಾತನಾಡಬೇಕು ಎಂದು ಹೇಳಿದರು.

ಕಾರ್ಯಕರ್ತರು ಯಾರೂ ಪಕ್ಷಕ್ಕೆ ಇದುವರೆಗೂ ರಾಜೀನಾಮೆ ಸಲ್ಲಿಸಿಲ್ಲ.

ರಾಜೀನಾಮೆ ನೀಡಿದಾಕ್ಷಣ ಅಂಗೀಕಾರವಾಗುವುದಿಲ್ಲ. ಎಲ್ಲರನ್ನು ಕರೆದು ಮಾತನಾಡಿಸಿ ಸಮಾಧಾನಪಡಿಸುತ್ತೇವೆ ಎಂದು ಸಿದ್ದೇಶ್ವರ ಹೇಳಿದರು.

# ಕಾಡಾದಿಂದ ಭದ್ರೆಗೆ ಭಕ್ತಿಯ ಬಾಗಿನ

ಬಿ.ಆರ್.ಪ್ರಾಜೆಕ್ಟ್, ಜು.30- ಮಧ್ಯ ಕರ್ನಾಟಕದ ಜನರ ಜೀವನಾಡಿಯಂತಲೇ ಕರೆಸಿಕೊಳ್ಳುವ ಭದ್ರಾ ಜಲಾಶಯ 4-5 ಜಿಲ್ಲೆಗಳ ರೈತರ ಉಸಿರು.

ರಾಜ್ಯದ ಅದೆಷ್ಟೋ ಮನೆಯಂಗಳದ ಬೆಳಕಿಗೆ ಮೂಲ ಕಾರಣವಾದ ಜಲಾಶಯದ ಸೃಷ್ಟಿಗೆ ಕಾರಣಕರ್ತರಾದ ಜಿಲ್ಲೆಯ ಸರ್ ಎಂ.ವಿಶ್ವೇಶ್ವರಯ್ಯ ಅವರನ್ನು ಈ ಸಂದರ್ಭದಲ್ಲಿ ನೆನೆಯಬೇಕು.

ಅವರ ಮಹತ್ವದ ಸಾಧನೆಯ ಕನಸಿನ ಕೂಸು ಹಾಗೂ ಸಹಸ್ರಾರು ರೈತ ಬಾಂಧವರ ಮಹಾತಾಯಿಯಾದ ಭದ್ರೆಯ ಒಡಲು ತುಂಬಿ ಹರಿಯುತ್ತಿದ್ದು, ಈ ದಿನ ಆ ತಾಯಿಗೆ ಮಡಿಲು ತುಂಬಿ ಹರಸುವಂತಹ ಸೌಭಾಗ್ಯ ನನ್ನದಾಗಿದೆ. ಇದು ನನ್ನ ಸೌಭಾಗ್ಯ ಹಾಗೂ ಸಂತೋಷದ ಕ್ಷಣ ಎಂದು ಭದ್ರಾ ಕಾಡಾ ಅಧ್ಯಕ್ಷರಾದ ಶ್ರೀಮತಿ ಪವಿತ್ರ ರಾಮಯ್ಯ ಹೇಳಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಕೆ.ಸಿ. ನಾರಾಯಣಗೌಡ, ಸಂಸದ ಬಿ.ವೈ.ರಾಘವೇಂದ್ರ, ಶಾಸಕರಾದ ಎಸ್. ರುದ್ರೇಗೌಡ, ಡಿ.ಎಸ್ ಅರುಣ್, ಕೆ.ಬಿ.ಅಶೋಕ್ ನಾಯ್ಕ್, ಭದ್ರಾ ಅಚ್ಚು ಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಸದಸ್ಯರುಗಳು, ಜಿಲ್ಲಾಧಿಕಾರಿ ಸೆಲ್ವಮಣಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಿ ಪ್ರಸಾದ್, ಕುವೆಂಪು ವಿಶ್ವವಿದ್ಯಾಲಯದ ಪ್ರೊ. ಬಿ.ಪಿ.ವೀರಭದ್ರಪ್ಪ, ಕುಲಸಚಿವರಾದ ಶ್ರೀಮತಿ ಅನುರಾಧ, ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶ್ರೀಮತಿ ಎಂ. ಎಲ್.ವೈಶಾಲಿ, ನೀರಾವರಿ ಇಲಾಖೆ ಅಧಿಕಾರಿಗಳು ಹಾಗೂ ಭದ್ರಾ ಅಚ್ಚುಕಟ್ಟು ಪ್ರಾಧಿಕಾರದ ಅಧಿಕಾರಿಗಳು, ಸಿಂಗನಮನೆ ಗ್ರಾಮ ಪಂಚಾಯಿತಿ ಅಧ್ಯಕ್ಷರು ಹಾಗೂ ಸದಸ್ಯರು ಮತ್ತು ರೈತರು ಹಾಗೂ ರೈತ ಮುಖಂಡರು ಹಾಜರಿದ್ದರು.



# ನಗರದಲ್ಲಿ ಇಂದು ಲೇಖಕಿ ಸುನಿತಾ ಪ್ರಕಾಶ್ ಅವರ 'ಶರಣ್ಯ' ಕಥಾ ಸಂಕಲನ ಲೋಕಾರ್ಪಣೆ



ದಾವಣಗೆರೆ, ಜು. 30- ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಜನಮಿಡಿತ ದಿನಪತ್ರಿಕೆ, ಜ್ಞಾನ ಪ್ರಕಾಶನ, ಸ್ಫೂರ್ತಿ ಪ್ರಕಾಶನ ತೆಲಗಿ ಇವರ ಸಹಯೋಗದಲ್ಲಿ ಪ್ರತಿಭಾನ್ವಿತ ಸಾಹಿತಿ ಶ್ರೀಮತಿ ಸುನೀತಾ ಪ್ರಕಾಶ್ ಅವರ ಶರಣ್ಯ ಕಥಾಸಂಕಲನ ಕೃತಿ ಲೋಕಾರ್ಪಣೆ ಕಾರ್ಯಕ್ರಮವು ನಾಳೆ ದಿನಾಂಕ 31ರ ಭಾನುವಾರ ನಗರದ ಕುವೆಂಪು ಕನ್ನಡ ಭವನದಲ್ಲಿ ನಡೆಯಲಿದೆ.

ಪತ್ರಿಕಾಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದ ಪಕ್ಕೀರೇಶ್ ಆದಾಪುರ ಅವರು, ಕೃತಿ ಲೋಕಾರ್ಪಣೆ ಜೊತೆಗೆ ಸಾಂಸ್ಕೃತಿಕ ಸೌರಭ, ಗೌರವಾರ್ಪಣೆ ಹಾಗೂ ಕವಿಗೋಷ್ಠಿ ಕಾರ್ಯಕ್ರಮಗಳೂ ನಡೆಯಲಿವೆ ಎಂದರು.

ದೂಡಾ ಅಧ್ಯಕ್ಷ ಕೆ.ಎಂ. ಸುರೇಶ್ ಸಮಾರಂಭವನ್ನು ಉದ್ಘಾಟಿಸಲಿದ್ದು, ಕಸಾಪ ಅಧ್ಯಕ್ಷ ಬಿ.ವಾಮದೇವಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ. ಸಿದ್ಧಗಂಗಾ ವಿದ್ಯಾಸಂಸ್ಥೆ ಸಂಸ್ಥಾಪಕರಾದ ಶ್ರೀಮತಿ ಜಸ್ಟಿನ್ ಡಿಸೌಜ ಚಿತ್ರಕಲೆ ಪ್ರದರ್ಶನ ಉದ್ಘಾಟಿಸಲಿದ್ದಾರೆ.

ಜನಮಿಡಿತ ಸಂಪಾದಕ ಜಿ.ಎಂ.ಆರ್. ಆರಾಧ್ಯ ಅವರು ಶರಣ್ಯ ಕಥಾ ಸಂಕಲನ ಬಿಡುಗಡೆ ಮಾಡಲಿದ್ದಾರೆ. ಹಿರಿಯ ಸಾಹಿತಿ ವಿದ್ಯಾಧರ ಮುತಾಲಿಕ್ ದೇಸಾಯಿ ಕೃತಿ ಕುರಿತು ಮಾತನಾಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಎಂ. ಬಸವರಾಜ್, ಮಲ್ಲಮ್ಮ ನಾಗರಾಜ್, ವೀಣಾ ಕೃಷ್ಣಮೂರ್ತಿ ಆಗಮಿಸಲಿದ್ದಾರೆ.

ಆಶ್ರಯ ಆಸ್ಪತ್ರೆ ಸಂಸ್ಥಾಪಕ ಡಾ.ಎಂ.ಶಿವಕುಮಾರ್, ಜಿಲ್ಲಾ ವರದಿಗಾರರ ಕೂಟದ ಅಧ್ಯಕ್ಷ ಕೆ..ಏಕಾಂತಪ್ಪ, ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಇ.ಎಂ. ಮಂಜುನಾಥ, ರೇಖಾ ಡಿಟಿಪಿಯ ರೇಖಾ ಶಿವಕುಮಾರ್, ಚಿತ್ರ ಕಲಾವಿದ ಪ್ರದೀಪ್ ಜಿ.ಎಸ್. ಅವರಿಗೆ ಗೌರವಾರ್ಪಣೆ ನಡೆಯಲಿದೆ.

ಪತ್ರಿಕಾಗೋಷ್ಠಿಯಲ್ಲಿ ಸುನೀತಾ ಪ್ರಕಾಶ್, ವೀರಭದ್ರಪ್ಪ ತೆಲಗಿ, ಮಲ್ಲಮ್ಮ ನಾಗರಾಜ್, ರೇಖಾ ಶಿವಕುಮಾರ್ ಉಪಸ್ಥಿತರಿದ್ದರು.

# ಫಜೀಲ್, ಮಸೂದ್ ಕುಟುಂಬಕ್ಕೆ ಪರಿಹಾರಕ್ಕೆ ಆಗ್ರಹಿಸಿ ಜಿಲ್ಲಾ ಕಾಂಗ್ರೆಸ್ ಪ್ರತಿಭಟನೆ




ದಾವಣಗೆರೆ, ಜು.30- ಮುಸ್ಲಿಂ ಸಮಾಜದ ಫಜೀಲ್ ಮತ್ತು ಮಸೂದ್ ಕುಟುಂಬಕ್ಕೆ ಕೂಡಲೇ ಪರಿಹಾರ ನೀಡಬೇಕೆಂದು ಆಗ್ರಹಿಸಿ, ನಗರದಲ್ಲಿ ಇಂದು ಜಿಲ್ಲಾ ಕಾಂಗ್ರೆಸ್ ಪ್ರತಿಭಟನೆ ನಡೆಸಿತು.

ಜಯದೇವ ವೃತ್ತದಲ್ಲಿ ಜಮಾಯಿಸಿದ್ದ ಪಕ್ಷದ ಮುಖಂಡರು, ಕಾರ್ಯಕರ್ತರು ರಾಜ್ಯ ಬಿಜೆಪಿ ಸರ್ಕಾರ ಪರಿಹಾರ ನೀಡುವಲ್ಲಿಯೂ ಧರ್ಮರಾಜಕಾರಣ ಮಾಡುತ್ತಿರುವುದಾಗಿ ಆಕ್ರೋಶ ವ್ಯಕ್ತಪಡಿಸಿದರು.

ಇದೇ ವೇಳೆ ಪಕ್ಷದ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ ಮತ್ತು ಎಸ್. ಮಲ್ಲಿಕಾರ್ಜುನ್ ಮಾತನಾಡಿ, ರಾಜ್ಯದ ಬಿಜೆಪಿ ಸರ್ಕಾರದ ಆಡಳಿತದಲ್ಲಿ ಕೋಮು ಗಲಭೆ ಹೆಚ್ಚಾಗಿ, ಸರಣಿ ಹತ್ಯೆಗಳು ನಡೆಯುತ್ತಿವೆ. ಪ್ರವೀಣ್ ನೆಟ್ಟಾರು ಹತ್ಯೆ ಖಂಡನೀಯವಾದುದು. ಅವರ ಕುಟುಂಬಕ್ಕೆ ಸರ್ಕಾರ ಪರಿಹಾರ ನೀಡಿದಂತೆ, ಮಸೂದ್, ಫಾಜೀಲ್ ಕುಟುಂಬಕ್ಕೂ ನೀಡಬೇಕು ಎಂದು ಒತ್ತಾಯಿಸಿದರು.

ಕೆಪಿಸಿಸಿ ವಕ್ತಾರ ಡಿ. ಬಸವರಾಜ್ ಮಾತನಾಡಿ, ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹಾಳಾಗಿದ್ದು, ಅರಾಜಕತೆ ಸೃಷ್ಟಿಯಾಗಿದೆ ಎಂದರು.

ಪ್ರತಿಭಟನೆಯಲ್ಲಿ ಪಕ್ಷದ ಮುಖಂಡರಾದ ಎ.ನಾಗರಾಜ್, ನಿಖಿಲ್ ಕೊಂಡಜ್ಜಿ, ಕೆ.ಜಿ. ಶಿವಕುಮಾರ್, ಸೋಮಲಾಪುರ ಹನುಮಂತಪ್ಪ, ಟಿ. ರಮೇಶ್, ದ್ರಾಕ್ಷಾಯಣಮ್ಮ, ಲಿಯಾಖತ್ ಅಲಿ, ಗೀತಾ ಚಂದ್ರಶೇಖರ್, ದ್ರಾಕ್ಷಾಯಣಮ್ಮ, ರಾಮೇಶ್ವರಿ, ಮಂಗಳಮ್ಮ, ಮಂಜುಳ, ರತ್ನ, ಸುಭಾನ್ ಸಾಬ್ ಸೇರಿದಂತೆ ಇತರರು ಪಾಲ್ಗೊಂಡಿದ್ದರು.

# ಕಾರ್ಯಕರ್ತರು ತಕ್ಕ ಪ್ರತಿಕ್ರಿಯೆ ಕೊಡುತ್ತಾರೆ

ದಾವಣಗೆರೆ, ಜು. 30 – ಬಿಜೆಪಿ ನಾಯಕರ ವಿರುದ್ಧ ಪಕ್ಷದ ಕಾರ್ಯಕರ್ತರು ಪ್ರತಿಭಟಿಸಿರುವ ಕುರಿತು ಪ್ರತಿಕ್ರಿಯಿಸಿರುವ ಯುವ ಬ್ರಿಗೇಡ್ ನಾಯಕ ಹಾಗೂ ವಾಗ್ಮಿ ಚಕ್ರವರ್ತಿ ಸೂಲಿಬೆಲೆ, ನಾಯಕರು ಆಡಿರುವ ಮಾತಿಗೆ ಕಾರ್ಯಕರ್ತರು ತಕ್ಕ ಪ್ರತಿಕ್ರಿಯೆ ಕೊಡುತ್ತಾರೆ ಎಂದಿದ್ದಾರೆ. ಪ್ರವೀಣ್ ನೆಟ್ಟಾರು ಹತ್ಯೆ ಹಿನ್ನೆಲೆಯಲ್ಲಿ ಕಾರ್ಯಕರ್ತರು ರಾಜೀನಾಮೆ ನೀಡಿದರೆ ಬೇರೆಯವರು ಬರುತ್ತಾರೆ ಎಂದು ಬಿಜೆಪಿಯ ಮುಖಂಡರು ಇತ್ತೀಚೆಗೆ ಉಡಾಫೆಯ ಮಾತುಗಳನ್ನಾಡಿದ್ದು ತೀವ್ರ ಆಕ್ರೋಶಕ್ಕೆ ಕಾರಣವಾಗಿತ್ತು.

ಈ ಕುರಿತ ಪ್ರಶ್ನೆಗೆ ಉತ್ತರಿಸಿದ ಸೂಲಿಬೆಲೆ, ಬಿಜೆಪಿ ಸಂಘ ಮತ್ತು ಕಾರ್ಯಕರ್ತರನ್ನು ಆಧರಿಸಿದ ಪಕ್ಷ. ಇಲ್ಲಿ ನಾಯಕರಿಗಿಂತ ಕಾರ್ಯಕರ್ತರ ಮಾತಿಗೇ ಬೆಲೆ ಇದೆ ಎಂದರು.

ಸಂಘದಲ್ಲೂ ಸ್ವಯಂ ಸೇವಕರ ಮಾತಿಗೆ ಬೆಲೆ ಇದೆ. ಹೀಗಾಗಿಯೇ ನಾವು ಇಷ್ಟು ಜೋರಾಗಿ ಮಾತನಾಡಿದರೂ ಸಂಘ ನಿರ್ಬಂಧಿಸುವುದಿಲ್ಲ. ಇಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ಇದೆ ಎಂದರು.



ಕಾಂಗ್ರೆಸ್ ಇಲ್ಲವೇ ಜನತಾದಳದಲ್ಲಿ ಈ ರೀತಿಯ ಪರಿಸ್ಥಿತಿ ಇಲ್ಲ. ಬಿಜೆಪಿಯಲ್ಲಿ ಆರೋಗ್ಯ ಕರ ವಾತಾವರಣ ಇದೆ ಎಂದವರು ಹೇಳಿದರು.

ನಾಯಕರು ಆಡಿರುವ ಮಾತಿಗೆ ಕಾರ್ಯಕರ್ತರು ತಕ್ಕ ಪ್ರತಿಕ್ರಿಯೆ ಕೊಡುತ್ತಾರೆ. ಹಿರಿಯ ನಾಯಕರು ಅದಕ್ಕೆ ಬೇಕಾದ ವಾತಾವರಣ ಸೃಷ್ಟಿಸಲಿದ್ದಾರೆ ಎಂದು ತಿಳಿಸಿದರು.

# ನಾಗರ ಪಂಚಮಿ ಪ್ರಯುಕ್ತ ನಗರದಲ್ಲಿ ನಾಳೆ ಕಲ್ಲು ನಾಗರಕ್ಕೆ ಹಾಕುವ ಹಾಲು ಮಕ್ಕಳ ಪಾಲು

ದಾವಣಗೆರೆ, ಜು.30- ಪಿ.ಎಲ್.ಇ ಟ್ರಸ್ಟ್, ಜೆ.ಜೆ.ಎಂ. ಸ್ಕೂಲ್ ಮತ್ತು ಜಿ.ಎನ್.ಬಿ ಆಂಗ್ಲ ಮಾಧ್ಯಮ ಪ್ರೌಢಶಾಲೆ ಇವರ ಸಹಯೋಗದಲ್ಲಿ ನಾಗರ ಪಂಚಮಿ ಪ್ರಯುಕ್ತ 24ನೇ ವರ್ಷದ 'ಕಲ್ಲು ನಾಗರಕ್ಕೆ ಹಾಕುವ ಹಾಲು ಮಕ್ಕಳ ಪಾಲು' ಸಪ್ತಾಹದ ಉದ್ಘಾಟನಾ ಸಮಾರಂಭ ನಾಡಿದ್ದು ಆಗಸ್ಟ್ 1 ರ ಸೋಮವಾರ ಬೆಳಿಗ್ಗೆ 9.30 ಕ್ಕೆ ನಗರದ ಬಿಜೆಎಂ ಸ್ಕೂಲ್‌ನಲ್ಲಿ ನಡೆಯಲಿದೆ.

ದಿವ್ಯ ಅಧ್ಯಕ್ಷತೆಯನ್ನು ಲಿಂಗಾಯತ ಪಂಚಮಸಾಲಿ ಜಗದ್ಗುರು ಮಹಾಪೀಠ ಕೂಡಲಸಂಗಮದ ಶ್ರೀ ಬಸವ ಜಯಮೃತ್ಯುಂಜಯ ಸ್ವಾಮೀಜಿ ವಹಿಸುವರು. ಕಾರ್ಯಕ್ರಮವನ್ನು ಜಿಲ್ಲಾಧಿಕಾರಿ ಡಾ. ಶಿವಾನಂದ ಕಪಾಸಿ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ಶಾಸಕ ಪ್ರೊ. ಲಿಂಗಣ್ಣ, ಜಿಲ್ಲಾ ರಕ್ಷಣಾಧಿಕಾರಿ ಸಿ.ಬಿ. ರಿಷ್ಯಂತ್ ಆಗಮಿಸುವರು ಎಂದು ಪಿ.ಎಲ್.ಇ ಟ್ರಸ್ಟ್ ಕಾರ್ಯದರ್ಶಿ ಕೆ.ಎಸ್. ಮಂಜುನಾಥ್ ಅಗಡಿ ತಿಳಿಸಿದ್ದಾರೆ.


## ಪುಣ್ಯಸ್ಮರಣೆ



ದಿ|| ಎಸ್.ಪಿ. ಸಂಗಪ್ಪ, ದಿ|| ಶ್ರೀಮತಿ ಸರ್ವಮಂಗಳಮ್ಮ

'ಆದರ್ಶ ಜೀವನದ ಅಪೂರ್ವ ಉದಾಹರಣೆ ನೀವು', 'ನಿಮ್ಮ ಆದರ್ಶಗಳನ್ನು ಅನುಸರಿಸುತ್ತಾ ಧನ್ಯರು ನಾವು'.

ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು, ಮರಿ ಮೊಮ್ಮಕ್ಕಳು ಹಾಗೂ ಬಂಧು ವರ್ಗ

## ಭಾವಪೂರ್ಣ ಶ್ರದ್ಧಾಂಜಲಿ



ಶ್ರೀ ಮುರುಘರಾಜೇಂದ್ರ ಕೋ-ಆಪರೇಟಿವ್ ಬ್ಯಾಂಕಿನ ಮಾಜಿ ಅಧ್ಯಕ್ಷರೂ, ಹಾಲಿ ನಿರ್ದೇಶಕರೂ, ನಮ್ಮ ಬಂಧುಗಳೂ ಆಗಿರುವ

**ಶ್ರೀ ಸೋಗಿ ಆರ್. ಶಿವಯೋಗಿ**

ಅವರು, ದಿನಾಂಕ : 30.07.2022ರಂದು ಲಿಂಗೈಕ್ಯರಾಗಿದ್ದು, ಶ್ರೀಯುತರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಮತ್ತು ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥನೆ.

ವಾಣಿ ಪ್ರಭು ಮತ್ತು ಕುಟುಂಬ ವರ್ಗದವರು
ಶ್ರೀ ವಾಣಿ ಕಾರ್ಪೋರೇಷನ್, ದಾವಣಗೆರೆ.

## ಭಾವಪೂರ್ಣ ಶ್ರದ್ಧಾಂಜಲಿ



ಶ್ರೀಮತಿ ದೇವೀರಮ್ಮ
ದಾವಣಗೆರೆ

ನೀವು ನಮ್ಮನ್ನಗಲಿ ಇಂದಿಗೆ ಎರಡು ವರ್ಷವಾಯಿತು. ನೀವು ಹಾಕಿಕೊಟ್ಟ ಹಾದಿಯಲ್ಲೇ ಮುನ್ನಡೆಯುತ್ತಿರುವ ಹಾಗೂ ಸದಾ ನಿಮ್ಮ ನೆನಪಿನಲ್ಲಿರುವ...

ಪತಿ : ಜಗದೇವಯ್ಯ, ಮಕ್ಕಳು, ಸೊಸೆಯಂದಿರು, ಅಳಿಯ, ಮೊಮ್ಮಕ್ಕಳು, ಮರಿಮೊಮ್ಮಕ್ಕಳು

## ದೊಡ್ಡಬಾತಿ ಪೂಜಾರ್ ಗಿರಜಮ್ಮ ನಿಧನ




ದಾವಣಗೆರೆ ತಾಲ್ಲೂಕು ದೊಡ್ಡಬಾತಿ ಗ್ರಾಮದ ವಾಸಿ ದೊಡ್ಡಬಾತಿ ಪೂಜಾರ್ ಕಲಿವೀರಪ್ಪನವರ ವೀರಪ್ಪನವರ ಧರ್ಮಪತ್ನಿ

**ಗಿರಿಜಮ್ಮ**

ಇವರು ದಿನಾಂಕ 30.7.2022ರ ಶನಿವಾರ ಮಧ್ಯಾಹ್ನ 1.20ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 83 ವರ್ಷ ವಯಸ್ಸಾಗಿತ್ತು. ಮೂವರು ಪುತ್ರರು, ನಾಲ್ವರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 31.7.2022ರ ಭಾನುವಾರ ಮಧ್ಯಾಹ್ನ 12.30ಕ್ಕೆ ಮೃತರ ಸ್ವಗ್ರಾಮವಾದ ದಾವಣಗೆರೆ ತಾಲ್ಲೂಕು ದೊಡ್ಡಬಾತಿ ಗ್ರಾಮದ ರುದ್ರಭೂಮಿಯಲ್ಲಿ ನೆರವೇರಲಿದೆ.

ದುಃಖ ತಪ್ತಕುಟುಂಬ ವರ್ಗ - ಕಲಿವೀರಪ್ಪನವರ ವಂಶಸ್ಥರು.
ದೊಡ್ಡಬಾತಿ. ಮೊ : 99459 94346


# ಪಂಚರ್ ಆಗಿದ್ದ ಅಂಬ್ಯುಲೆನ್ಸ್ ರಿಪೇರಿಗೆ ಸಹಾಯ ಮಾಡಿದ ರೇಣುಕಾಚಾರ್ಯ




ಹೊನ್ನಾಳಿ, ಜು. 30- ಪಂಚರ್ ಆಗಿದ್ದ ಅಂಬ್ಯುಲೆನ್ಸ್ ರಿಪೇರಿಗೆ ಸಹಾಯ ಮಾಡುವ ಮೂಲಕ ಸಿಎಂ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ ಮಾನವೀಯತೆ ಮೆರೆದಿದ್ದಾರೆ.

ಶುಕ್ರವಾರ ರಾತ್ರಿ 10.30 ರ ಸುಮಾರಿಗೆ ನ್ಯಾಮತಿ ರಸ್ತೆಯಲ್ಲಿ ಮಣಿಪಾಲಿಗೆ ರೋಗಿಯನ್ನು ಕರೆದುಕೊಂಡು ಹೋಗುತ್ತಿದ್ದ ಅಂಬ್ಯುಲೆನ್ಸ್ ಪಂಚರ್ ಆಗಿದ್ದು, ಅಂಬ್ಯುಲೆನ್ಸ್ ಚಾಲಕ ಟಯರ್ ಬದಲಿಸಲು ಹರಸಾಹಸ ಪಡುತ್ತಿದ್ದರು. ಇದೇ ಮಾರ್ಗವಾಗಿ ಆಗಮಿಸುತ್ತಿದ್ದ ಶಾಸಕರು, ಕೂಡಲೇ ತಮ್ಮ ವಾಹನವನ್ನು ನಿಲ್ಲಿಸಿ ಆಂಬ್ಯುಲೆನ್ಸ್ ಬಳಿ ಹೋಗಿದ್ದಾರೆ, ಅಷ್ಟೇ ಅಲ್ಲದೇ ತಮ್ಮ ವಾಹನದಲ್ಲಿದ್ದ ಜಾಕ್‌ಅನ್ನು ಆಂಬ್ಯುಲೆನ್ಸ್ ಚಾಲಕನಿಗೆ ನೀಡಿ ಟಯರ್ ಬದಲಿಸಲು ನೆರವಾಗಿದ್ದಾರೆ.

ಆಂಬ್ಯುಲೆನ್ಸ್ ಚಾಲಕ ಟಯರ್ ಬದಲಿಸುವಷ್ಟರಲ್ಲಿ 11 ಘಂಟೆಯಾಗಿದ್ದು, ವಿಪರ್ಯಾಸವೆಂದರೆ ಆಂಬ್ಯುಲೆನ್ಸ್‌ಗೆ ಹಾಕಿದ್ದ ಟಯರ್‌ನಲ್ಲಿ ಗಾಳಿ ಕಡಿಮೆ ಇದ್ದು, ಅದನ್ನು ಗಮನಿಸಿದ ಶಾಸಕರು, ತಡರಾತ್ರಿಯಲ್ಲೂ ಆಂಬ್ಯುಲೆನ್ಸ್ ಟಯರ್‌ಗೆ ಗಾಳಿ ಹಿಡಿಸುವ ವ್ಯವಸ್ಥೆ ಮಾಡಿದರಲ್ಲದೇ, ಆಂಬ್ಯುಲೆನ್ಸ್‌ನಲ್ಲಿರುವ ರೋಗಿಯ ಆರೋಗ್ಯ ವಿಚಾರಿಸಿ ಕುಟುಂಬಸ್ಥರಿಗೆ ಧೈರ್ಯ ಹೇಳುವ ಮೂಲಕ ಮಾನವೀಯತೆಯ ಮೌಲ್ಯವನ್ನು ಶಾಸಕರು ಎತ್ತಿ ಹಿಡಿದಿದ್ದಾರೆ.

# ನಂದಿಗುಡಿ : ಇಂದು ನಂದಿ ಸೌಹಾರ್ದ ಸಹಕಾರಿ ವಾರ್ಷಿಕ ಮಹಾಸಭೆ

ಮಲೇಬೆನ್ನೂರಿನ ಶ್ರೀ ನಂದಿ ಸೌಹಾರ್ದ ಸಹಕಾರಿಯ 2021-22ನೇ ಸಾಲಿನ 3ನೇ ವಾರ್ಷಿಕ ಸರ್ವ ಸದಸ್ಯರ ಮಹಾಸಭೆಯನ್ನು ನಂದಿಗುಡಿ ಬೃಹನ್ಮಠದ ಸಮುದಾಯ ಭವನದಲ್ಲಿ ಇಂದು ಮಧ್ಯಾಹ್ನ 12 ಗಂಟೆಗೆ ಸಹಕಾರಿ ಅಧ್ಯಕ್ಷ ಜಿಗಳಿ ಇಂದೂಧರ್ ಅವರ ಅಧ್ಯಕ್ಷತೆಯಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಸಹಕಾರಿ ಕಾರ್ಯದರ್ಶಿ ಬಸವರಾಜಪ್ಪ ತಿಳಿಸಿದ್ದಾರೆ.

# ನಗರದಲ್ಲಿ ಇಂದು ಕಲಾ ಕೃತಿಕ- ಫ್ಯಾಷನ್ ಉತ್ಸವ

ಕಲಾನಿಕೇತನ ಕಾಲೇಜ್ ಆಫ್ ಫ್ಯಾಷನ್ ಡಿಜೈನಿಂಗ್ ಕಾಲೇಜಿನ ವಾರ್ಷಿಕ ದಿನಾಚರಣೆ 'ಕಲಾ ಕೃತಿಕ-2022' ಫ್ಯಾಷನ್ ಉತ್ಸವ ಕಾರ್ಯಕ್ರಮವು ಇಂದು ಬೆಳಿಗ್ಗೆ 10 ಕ್ಕೆ ಹೋಟೆಲ್ ಪಂಜುರ್ಲಿಯಲ್ಲಿ ಜರುಗಲಿದೆ.

ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಪ್ರೊ. ಎನ್.ಎಲ್. ಮಲ್ಲಿಕಾರ್ಜುನ್ ಕಾರ್ಯಕ್ರಮ ಉದ್ಘಾಟಿಸಲಿದ್ದು, ಮುಖ್ಯಅತಿಥಿಗಳಾಗಿ ಮಾಜಿ ಮಹಾಪೌರ ಎಸ್.ಟಿ. ವೀರೇಶ್, ಎವಿಕೆ ಕಾಲೇಜಿನ ಸಹಾಯಕ ಪ್ರಾಧ್ಯಾಪಕಿ ಡಾ. ಆರ್.ಜಿ. ಕವಿತ ಭಾಗವಹಿಸಲಿದ್ದಾರೆ. ವಿಶೇಷ ಆಹ್ವಾನಿತರಾಗಿ ವೀಣಾ ಹೆಗಡೆ, ಡಾ. ನಮ್ರತಾ ಎಂ., ಜಯಲಕ್ಷ್ಮಿ ಶಶಿಕುಮಾರ್ ಮೆಹರ್‌ವಾಡೆ ಪಾಲ್ಗೊಳ್ಳಲಿದ್ದು, ವಿದ್ಯಾಸಂಸ್ಥೆಯ ಕಾರ್ಯದರ್ಶಿ ಅಶೋಕ ರಾಯಬಾಗಿ ಅಧ್ಯಕ್ಷತೆಯನ್ನು ವಹಿಸುವರು. ಸಂಜೆ 4 ಗಂಟೆಗೆ ನಡೆಯುವ ಸಮಾರೋಪದಲ್ಲಿ ಕೈಮಗ್ಗ ಮತ್ತು ಜವಳಿ ಇಲಾಖೆ ಉಪ ನಿರ್ದೇಶಕ ಟಿ. ಸುರೇಶ್, ಡಾ. ಎಂ. ನಮ್ರತಾ ಮುಖ್ಯಅತಿಥಿಯಾಗಿ ಭಾಗವಹಿಸಲಿದ್ದು, ವಿಶೇಷ ಆಹ್ವಾನಿತರಾಗಿ ವೀಣಾ ಹೆಗಡೆ ಮತ್ತು ಜಯಲಕ್ಷ್ಮೀ ಮೆಹರ್‌ವಾಡೆ ಇರುವರು. ವಿದ್ಯಾಸಂಸ್ಥೆಯ ಕಾರ್ಯದರ್ಶಿ ಅಶೋಕ ರಾಯಬಾಗಿ ಅಧ್ಯಕ್ಷತೆ ವಹಿಸುವರು.


## ಭಾವಪೂರ್ಣ ಶ್ರದ್ಧಾಂಜಲಿ



ನಮ್ಮ ಬ್ಯಾಂಕಿನ ಮಾಜಿ ಅಧ್ಯಕ್ಷರೂ, ಹಾಲಿ ನಿರ್ದೇಶಕರೂ ಆಗಿರುವ

**ಶ್ರೀ ಸೋಗಿ ಆರ್. ಶಿವಯೋಗಿ**

ಅವರು, ದಿನಾಂಕ : 30.07.2022ರಂದು ಲಿಂಗೈಕ್ಯರಾಗಿದ್ದು, ಶ್ರೀಯುತರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಮತ್ತು ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥನೆ.

ಅಧ್ಯಕ್ಷರು, ಉಪಾಧ್ಯಕ್ಷರು ನಿರ್ದೇಶಕರು ಹಾಗೂ ಸಿಬ್ಬಂದಿ ವರ್ಗದವರು ಮತ್ತು ಪಿಗ್ಮಿ ಸಂಗ್ರಹಕಾರರು

**ಶ್ರೀ ಮುರುಘರಾಜೇಂದ್ರ ಕೋ-ಆಪರೇಟಿವ್ ಬ್ಯಾಂಕ್**
ಕುವೆಂಪು ರಸ್ತೆ, ಶ್ರೀ ಜಯದೇವ ಮುರುಘರಾಜೇಂದ್ರ ವೃತ್ತದ ಬಳಿ, ದಾವಣಗೆರೆ.

## ಗುರುಲಿಂಗ ಜಂಗಮಾರಾಧನೆ



ದಾವಣಗೆರೆ ಸಿಟಿ ವಾಸಿ ಕುರುಡಿಮಠದ ಶ್ರೀಮತಿ ಲಲಿತಮ್ಮ ಮತ್ತು ಮಕ್ಕಳು ಇವರು ಮಾಡುವ ವಿಜ್ಞಾಪನೆಗಳು. ದಿನಾಂಕ 28.7.2022ನೇ ಗುರುವಾರ ರಾತ್ರಿ 11.50ಕ್ಕೆ ನನ್ನ ಪೂಜ್ಯ ಪತಿಯವರಾದ

**ಶ್ರೀ ಕೆ.ಎಂ.ಚಂದ್ರಶೇಖರಯ್ಯ**

ನಿವೃತ್ತ ಶಿಕ್ಷಕರು ಹಾಗೂ ರಾಜ್ಯ ಮತ್ತು ರಾಷ್ಟ್ರ ಪಶಸ್ತಿ ವಿಜೇತರು. ಇವರು ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**ಗುರುಲಿಂಗ ಜಂಗಮಾರಾಧನೆಯನ್ನು**

ದಿನಾಂಕ 1.8.2022ನೇ ಸೋಮವಾರ ಮಧ್ಯಾಹ್ನ 12 ಗಂಟೆಗೆ ಬಾಪೂಜಿ ಸಮುದಾಯ ಭವನ ಶಾಮನೂರು ರಸ್ತೆ ಇಲ್ಲಿ ನೆರವೇರಿಸಲು ಗುರು ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :

ಶ್ರೀ ಕೆ.ಎಂ. ಕುರುಡಿ ಗಿರೀಶ್, ಶ್ರೀ ಕೆ.ಎಂ ಜಗದೀಶ್. ಶ್ರೀ ಕೆ.ಎಂ. ಪ್ರಣಿತ್ ಕುಮಾರ್ ಮತ್ತು ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಕುರುಡಿ ಮಠದ ವಂಶಸ್ಥರು, ಬಂಧು-ಮಿತ್ರರು.

ಮೊ : 94481 15555, 99861 73736, 99015 78882

# ವಾರ ಭವಿಷ್ಯ

**ದಿನಾಂಕ : 31.07.2022 ರಿಂದ 06.08.2022**
**- ಜಯತೀರ್ಥಾಚಾರ್ ವಡೇರ್, ದಾವಣಗೆರೆ.**

**ಮೇಷ (ಅಶ್ವಿನಿ, ಭರಣಿ, ಕೃತ್ತಿಕಾ)**
**(ಚೂ.ಚೇ.ಚೋ.ಲ.ಲಿ.ಉ.ಲೇ.ಲೊ.ಅ.)**

ನಿಮ್ಮ ಪರಿಶ್ರಮ ಹಾಗೂ ಬುದ್ಧಿವಂತಿಕೆಯಿಂದಾಗಿ ಹಣಕಾಸಿಗೆ ಸಂಬಂಧಿಸಿದ ಸಮಸ್ಯೆಗಳು ಹಂತ ಹಂತವಾಗಿ ಪರಿಹಾರವಾಗಲಿವೆ. ವಹಿಸಿಕೊಂಡ ಗುರುತರ ಜವಾಬ್ದಾರಿಯಿಂದಾಗಿ ಕೆಲಸ ಕಾರ್ಯಗಳು ಹೆಚ್ಚಾಗಲಿವೆ. ಆದರೆ ಅದು ಆರೋಗ್ಯದ ಮೇಲೆ ಅಡ್ಡಪರಿಣಾಮ ಬೀರದಂತೆ ಎಚ್ಚರವಹಿಸಿ. ಅಪರೂಪದ ಅತಿಥಿಗಳ ಆಗಮನದಿಂದ ಮನೆಯಲ್ಲಿ ಹಬ್ಬದ ವಾತಾವರಣ ಮೂಡಲಿದೆ. ಮಕ್ಕಳ ಅತಿಯಾದ ಮೋಜು, ಮಸ್ತಿ ನಿಮಗೆ ತಲೆನೋವಾಗಬಹುದು. ವೃತ್ತಿಯಲ್ಲಿ ಸಾಕಷ್ಟು ಸ್ಪರ್ಧೆ ಎದುರಾದರೂ, ಅಂತಿಮ ಜಯ ನಿಮ್ಮದೇ. ಹಿರಿಯರ ಭಾವನೆಗಳನ್ನು ಗೌರವಿಸಿ. ಭಾನು-ಮಂಗಳ-ಗುರು-ಶುಭ ದಿನಗಳು.

**ವೃಷಭ (ಕೃತ್ತಿಕಾ, 2,3,4, ರೋಹಿಣಿ, ಮೃಗ 1,2)**
**(ಇ.ಉ.ಎ.ಒ.ವ.ವಿ.ವು.ವೆ.ವೋ)**

ಉದ್ಯೋಗದಲ್ಲಿ ಅತಿ ಹೆಚ್ಚಿನ ವೇತನ ಪಡೆಯುವ ಭರದಲ್ಲಿ ದೂರದೂರುಗಳಿಗೆ ಹೋಗುವುದು ಮೂರ್ಖತನದ ಮಾತಾದೀತು. ಗೊತ್ತಾಗಿದ್ದ ಮಗಳ ಮದುವೆ ವಿಚಾರದಲ್ಲಿ ಮುಖ್ಯವಲ್ಲದ ಸಣ್ಣಪುಟ್ಟ ಮಾತುಗಳಿಂದಾಗಿ ಮನೆತನಗಳ ನಡುವೆ ಭಿನ್ನಾಭಿಪ್ರಾಯ ಮೂಡಬಹುದು. ಸಾಧ್ಯವಾದಷ್ಟು ಈ ವಿಷಯವನ್ನು ನಾಜೂಕಾಗಿ, ಬುದ್ಧಿವಂತಿಕೆಯಿಂದ ಬಗೆಹರಿಸಿಕೊಳ್ಳಿ. ಪೌಷ್ಟಿಕಾಹಾರ, ಸಾಕಷ್ಟು ವಿಶ್ರಾಂತಿಯನ್ನು ತೆಗೆದುಕೊಳ್ಳುವುದರಿಂದ ಆರೋಗ್ಯ ಸಮಸ್ಯೆ ಬಗೆಹರಿಯಲಿದೆ. ವ್ಯವಹಾರದಲ್ಲಿ ನಂಬಿದವರಿಂದಲೇ ಮೋಸ ಹೋಗುವಿರಿ. ಆದಾಯದಲ್ಲಿ ಹೆಚ್ಚಳ ಕಂಡುಬರಲಿದೆ. ಸೋಮ-ಬುಧ-ಗುರು-ಶುಭ ದಿನಗಳು.

**ಮಿಥುನ (3,4, ಆರಿದ್ರಾ, ಪುನರ್ವಸು 1,2,3)**
**(ಕ.ಕಿ.ಕು.ಘ, ಔ, ಚ.ಕೆ.ಕೋ.ಹ.)**

ಮಕ್ಕಳ ಬಯಕೆಯಂತೆ ವಿದ್ಯುನ್ಮಾನ ವಸ್ತುಗಳನ್ನು ಅವರಿಗೆ ಕೊಡಿಸಲು ಅಡ್ಡಿಯಿಲ್ಲ. ದೈನಂದಿನ ಜೀವನದ ಭಾಗವಾಗಿ ವಾಹನದ ಖರೀದಿಯಾಗಲಿದೆ. ಮಹಿಳೆಯರು ತಾವು ನಿರಂತರವಾಗಿ ಮಾಡುತ್ತಿದ್ದ ಗುರು ಸೇವೆಯ ಮಹತ್ವವನ್ನು ಈಗ ಅರಿಯಲಿದ್ದಾರೆ. ಆರ್ಥಿಕ ಮೂಲದಲ್ಲಿ ಕ್ರಮೇಣ ಹೆಚ್ಚಳ ಕಂಡುಬರಲಿದೆ. ಯುವಕರಿಗೆ ವೇತನದಲ್ಲಿ ಹೆಚ್ಚಳ. ಹಾಗೆಂದ ಮಾತ್ರಕ್ಕೆ, ದುಬಾರಿ ಶೈಲಿಯ ಜೀವನವನ್ನು ನಡೆಸುವುದು, ದುಂದುವೆಚ್ಚಕ್ಕೆ ಹಾದಿಯಾಗಲಿದೆ. ಭಾನು-ಮಂಗಳ-ಬುಧ-ಶುಭ ದಿನಗಳು.

**ಕರ್ಕಾಟಕ (ಪುನ 4, ಪುಷ್ಯ, ಆಶ್ಲೇಷ)**
**(ಹಿ.ಹು.ಹೆ.ಹೂ.ಡ.ಡಿ.ಡು.ಡೆ.ಡೋ)**

ನಿಮಗೆ ಇಚ್ಛೆಯಿಲ್ಲದಿದ್ದರೂ ವ್ಯವಹಾರ ನಿಮಿತ್ತವಾಗಿ ದೂರದ ಊರುಗಳಿಗೆ ಪ್ರಯಾಣ ಮಾಡಲೇಬೇಕಾದ ಪ್ರಸಂಗ ಬರಲಿದೆ. ಅದಕ್ಕೆಬೇಕಾದ ಪೂರ್ವಸಿದ್ಧತೆ ಚೆನ್ನಾಗಿರಲಿ. ಈ ಪ್ರವಾಸದಿಂದ ಹೆಚ್ಚಿನ ಲಾಭವಾಗಲಿದೆ. ಸಂತಾನಾಪೇಕ್ಷಿಗಳಿಗೆ ಶುಭ ಸಮಾಚಾರ ಇಷ್ಟರಲ್ಲೇ ಕೇಳಿ ಬರಲಿದೆ. ಸಮಾಜದಲ್ಲಿ ಗಣ್ಯವ್ಯಕ್ತಿಗಳೆನಿಸಿಕೊಂಡವರು, ಧಾರ್ಮಿಕ ಕಾರ್ಯಕ್ರಮಗಳಿಗೆ ಹೆಚ್ಚಿನ ವಂತಿಕೆ ನೀಡುವರು. ಆಸ್ತಿಗೆ ಸಂಬಂಧಪಟ್ಟ ಬಹುತೇಕ ಸಮಸ್ಯೆಗಳಿಗೆ ಇಷ್ಟರಲ್ಲೇ ಪರಿಹಾರ ಕಂಡುಬರಲಿದೆ. ಮಡದಿ ಮಕ್ಕಳ ಜೊತೆ ನೆಮ್ಮದಿಯ ಜೀವನವನ್ನು ಈ ವಾರಪೂರ್ತಿ ನಡೆಸುವಿರಿ. ದುರ್ಗಾದೇವಿಯನ್ನು ಆರಾಧಿಸಿ. ಭಾನು-ಸೋಮ-ಮಂಗಳ-ಶುಭ ದಿನಗಳು.

**ಸಿಂಹ ( ಮಘ, ಪುಬ್ಬ, ಉತ್ತರ 1)**
**(ಮ.ಮಿ.ಮು.ಮೋ.ವೆ.ಟ.ಟಿ.ಟು.ಟೆ)**

ಶುಭ ಸಮಾರಂಭವೊಂದರಲ್ಲಿ ಪರಿಚಿತರಾದ ಹೊಸ ಗೆಳೆಯನಿಂದ ಸರ್ಕಾರದ ಕೆಲಸಗಳು ಸುಸೂತ್ರವಾಗಲಿವೆ, ಲೆಕ್ಕಾಧಿಕಾರಿಗಳು ಅನಿರೀಕ್ಷಿತವಾಗಿ ತಪಾಸಣೆಗೆ ಬರುವ ಸಂಭವವಿರುವುದರಿಂದ ಕೈಗಾರಿಕೋದ್ಯಮಿಗಳು ಲೆಕ್ಕಪತ್ರಗಳನ್ನು ಅಚ್ಚುಕಟ್ಟಾಗಿ ಸಿದ್ಧಮಾಡಿಕೊಂಡಿರುವುದು ಮೇಲು. ಮಿತಿ-ಮೀರಿ ವರ್ತಿಸುತ್ತಿರುವ ಮಕ್ಕಳ ವಿಚಾರದಲ್ಲಿ, ಕೆಲವು ಬಾರಿ ಕಠಿಣ ಕ್ರಮ ಕೈಗೊಳ್ಳುವುದು ಉತ್ತಮ. ಔದ್ಯೋಗಿಕ ಸಮಸ್ಯೆಗಳ ಬಗ್ಗೆ ಮೇಲಾಧಿಕಾರಿಗಳೊಂದಿಗೆ ಮಾತುಕತೆ ನಡೆಸುವುದು ಮೇಲು. ಆದಾಯದ ಮೂಲವನ್ನು ಹೆಚ್ಚಿಸಿಕೊಳ್ಳಲು ಹರ ಸಾಹಸಪಡುವಿರಿ. ಭಾನು-ಬುಧ-ಗುರು-ಶುಭ ದಿನಗಳು.

**ಕನ್ಯಾ (ಉತ್ತರಾ 2,3,4, ಹಸ್ತಾ, ಚಿತ್ತಾ 1,2)**
**(ಟೋ.ಪ.ಪಿ.ಪು.ಷ.ಣ.ಠ.ಪೆ.ಪೋ)**

ಅನೇಕ ವರ್ಷಗಳ ಬಳಿಕ ಸಂತಾನವಾದ ಕಾರಣ ಮನೆಯಲ್ಲಿ ಪುತ್ರೋತ್ಸವದ ಸಂಭ್ರಮ ಜೋರಾಗಿಯೇ ನಡೆಯಲಿದೆ. ಮಧ್ಯವರ್ತಿಗಳ ಮಾತನ್ನು ನಂಬಿ, ಯಾರಿಗೇ ಆಗಲೀ ಮುಂಗಡ ಹಣ ಕೊಟ್ಟು, ವ್ಯವಹಾರವನ್ನು ಕುದುರಿಸಿಕೊಳ್ಳಲು ಹೋಗಬೇಡಿ. ಇಲ್ಲವಾದಲ್ಲಿ ಭಾರೀ ನಷ್ಟವನ್ನು ಅನುಭವಿಸಬೇಕಾದೀತು.ಅರ್ಧಕ್ಕೇ ನಿಂತು ಹೋಗಿದ್ದ ವಿದ್ಯಾಭ್ಯಾಸವನ್ನು ಮತ್ತೆ ಮುಂದುವರೆಸಲು ಇದು ಸಕಾಲ. ಕಾನೂನಾತ್ಮಕ ಹೋರಾಟದಲ್ಲಿ ಜಯ ಗಳಿಸುವಿರಿ. ವಿಷಯ ಯಾವುದೇ ಇರಲಿ, ಅಂತಿಮ ನಿರ್ಧಾರ ಮಾತ್ರ ನಿಮ್ಮದೇ ಅಗಿರಲಿ. ಹಣಕಾಸಿನ ವಿಚಾರದಲ್ಲಿ ಬಿಗುವಾಗಿರುವುದು ಉತ್ತಮ. ಬುಧ-ಗುರು-ಶುಕ್ರ-ಶುಭ ದಿನಗಳು.

**ತುಲಾ (ಚಿತ್ತಾ 3,4, ಸ್ವಾತಿ, ವಿಶಾಖ 1,2,3)**
**(ರ.ರಿ.ರು.ರೆ.ರೊ.ತ.ತಿ.ತು.ತೆ.)**

ಆಡದೇ ಮಾಡುವನು ರೂಢಿಯೊಳಗುತ್ತಮನು ಎಂಬ ಮಾತನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದು ಉತ್ತಮ. ಆತ್ಮವಿಶ್ವಾಸದೊಂದಿಗೆ ಮುನ್ನಡೆಯಿರಿ. ಕೃಷಿಕ ಮಿತ್ರರಿಗೆ ಬೇಸಾಯಕ್ಕೆ ಬೇಕಾದ ಅನುಕೂಲ ವಾತಾವರಣ ಉಂಟಾಗಲಿದೆ. ಉದ್ಯಮ ಕ್ಷೇತ್ರದಲ್ಲಿ ಸಾಕಷ್ಟು ಪ್ರಗತಿ ಕಂಡುಬರಲಿದೆ. ಶ್ರಮಪಟ್ಟು ದುಡಿಯುವವರಿಗೆ, ಸನ್ನಿವೇಶಗಳು ತಾನಾಗಿಯೇ ಅನುಕೂಲಕರವಾಗಲಿವೆ. ವಿದ್ಯಾರ್ಥಿಗಳು ಶ್ರದ್ಧೆಯಿಂದ ಓದಿನ ಕಡೆ ಗಮನವಿಟ್ಟಲ್ಲಿ ಮಾತ್ರ ಉತ್ತಮ ಭವಿಷ್ಯ ಕಾಣಲು ಸಾಧ್ಯ. ಮಸಾಲೆ ಪದಾರ್ಥಗಳ ಅತಿಸೇವನೆ ಒಳ್ಳೆದಲ್ಲ. ಬುಧ-ಶುಕ್ರ-ಶನಿ-ಶುಭ ದಿನಗಳು.

**ವೃಶ್ಚಿಕ (ವಿಶಾಖ 4, ಅನೂ, ಜೇಷ್ಠ)**
**(ತೊ.ನ.ನಿ.ನು.ನೆ.ನೋ.ಯ.ಯಿ.ಯು.)**

ಬದಲಾವಣೆ ಕಾಲದನಿ ಯಮನಾಗಿರುವುದರಿಂದ, ದೂರದೃಷ್ಟಿಯೊಂದಿಗೆ ಅದಕ್ಕೆ, ಹೊಂದಿಕೊಂಡು ಹೋಗುವುದು ಅನಿವಾರ್ಯವಾಗಲಿದೆ. ಹಣಕಾಸು ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವವರು ಸಾಕಷ್ಟು ಎಚ್ಚರದಿಂದಿರುವುದು ಮೇಲು.ಅಪರಿಚಿತರೊಂದಿಗೆ ಮಾಡುವ ಲೇವಾದೇವಿ ವ್ಯವಹಾರ ನಷ್ಟವನ್ನುಂಟು ಮಾಡಲಿದೆ. ಉನ್ನತ ಹುದ್ದೆಯನ್ನು ಬಯಸುವವರಿಗೆ, ತಮ್ಮ ಸ್ವಾರ್ಥದ ಅರಿವಿರುವುದು ಉತ್ತಮ. ಹೈನುಗಾರಿಕೆಯಲ್ಲಿ ಹೆಚ್ಚಿನ ಲಾಭವಿಲ್ಲದಿದ್ದರೂ, ಹೆಚ್ಚಿನ ವಹಿವಾಟು ಕಂಡುಬರಲಿದೆ. ಮಡದಿಯ ಆರೋಗ್ಯವನ್ನು ಯಾವುದೇ ಕಾರಣಕ್ಕೂ ಅಲಕ್ಷಿಸಬೇಡಿ. ಮಂಗಳ-ಬುಧ-ಗುರು-ಶುಭ ದಿನಗಳು.

**ಧನಸ್ಸು (ಮೂಲ, ಪೂರ್ವಾಷಾಡ, ಉತ್ತರಾಷಾಡ)**
**(ಯೆ.ಯೋ. ಬ.ಬಿ.ಬು.ಧ.ಫ.ಡ.ಬೆ.)**

ನೀವು ಕೆಲಸ ಮಾಡುವ ಕಾರ್ಪೊರೇಟ್ ಕಂಪನಿಗಳಲ್ಲಿ, ನಿಮ್ಮ ಬುದ್ಧಿ ಮತ್ತೆಗೆ ಅನುಗುಣವಾಗಿ, ನಿರೀಕ್ಷೆಗೂ ಮೀರಿದ ವೇತನ ಸಿಗಲಿದೆ. ಆಸೆ, ಆಕಾಂಕ್ಷೆಗಳೇನೇ ಇದ್ದರೂ, ಪ್ರಚಲಿತ ವಿದ್ಯಮಾನದ ಅರಿವಿರುವುದು ಮೇಲು. ಕಾಫೀ ಎಸ್ಟೇಟ್ ಅಥವಾ ತೋಟಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಭಯದ ವಾತಾವರಣ ಎದುರಾಗಲಿದೆ. ಈ ವಿಷಯದಲ್ಲಿ ಅವರು ಎಚ್ಚರದಿಂದಿರುವುದು ಮೇಲು. ರಾಜಕಾರಣಿಗಳಿಗೆ ಹೆಚ್ಚಿನ ಜವಾಬ್ದಾರಿ ವಹಿಸಿಕೊಳ್ಳುವಂತೆ ಪಕ್ಷದ ವರಿಷ್ಠರಿಂದ ಸೂಚನೆ ಬರಲಿದೆ. ದೈವಾನುಗ್ರಹದಿಂದ ಅಂದುಕೊಂಡಿದ್ದೆಲ್ಲವೂ ಅಂದುಕೊಂಡತೆಯೇ ನಡೆಯಲಿವೆ. ಭಾನು-ಸೋಮ-ಗುರು-ಶುಭ ದಿನಗಳು.

**ಮಕರ (ಉತ್ತರಾಷಾಢ 2,3,4, ಶ್ರವಣ, ಧನಿಷ್ಠಾ 1,2)**
**(ಜೊ.ಜ.ಜಿ.ಜೆ.ಶಿ.ಶು.ಶೇ.ಶೋ.ಗ.ಗಿ)**

ವಿದೇಶದಲ್ಲಿ ಓದಬೇಕೆಂದು ಹಂಬಲಿಸುವ ವಿದ್ಯಾರ್ಥಿಗಳಿಗೆ ಸಂಘ-ಸಂಸ್ಥೆಗಳಿಂದ ಹಣಕಾಸಿನ ನೆರವು ದೊರೆಯಲಿದೆ. ಅವಿವಾಹಿತರಿಗೆ ಅತ್ಯುತ್ತಮ ಸ್ಥಿತಿವಂತರೊಂದಿಗೆ ಸಂಬಂಧ ನಿಶ್ಚಯವಾಗಲಿದೆ. ವೃತ್ತಿಯಲ್ಲಿ ಉತ್ತಮ ವಾಗ್ಮಿಗಳಾದವರಿಗೆ, ಪದೋನ್ನತಿಯೊಂದಿಗೆ, ಮೇಲಾಧಿಕಾರಿಗಳ ಶಿಫಾರಸ್ಸಿನಿಂದಾಗಿ ವೇತನದಲ್ಲೂ ಹೆಚ್ಚಳ. ಆಸ್ತಿ ಖರೀದಿ ವಿಚಾರವನ್ನು ಕೆಲದಿನಗಳ ಮಟ್ಟಿಗೆ ಮುಂದೂಡುವುದು ಉತ್ತಮ.ಸಿನಿಮಾ ಕಲಾವಿದರಿಗೆ ಬಿಡುವಿಲ್ಲದಷ್ಟು ಉತ್ತಮ ಅವಕಾಶಗಳು ಬರಲಿವೆ. ವೈಯಕ್ತಿಕ ವಿಚಾರಗಳನ್ನು ಕಾಪಾಡಿಕೊಳ್ಳಿ. ಗುರು-ಶುಕ್ರ-ಶನಿ-ಶುಭ ದಿನಗಳು.

**ಕುಂಭ (ಧನಿಷ್ಠಾ, ಶತಭಿಷಾ, ಪೂರ್ವಾಭಾದ್ರ 1,2,3)**
**(ಗು.ಗೆ.ಗೊ.ಸ.ಸಿ.ಸು.ಸೆ.ಸೋ.ದ)**

ರಕ್ಷಣಾ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುವವರು ಈ ವಾರದಮಟ್ಟಿಗೆ ಕಾನೂನು ಪರಿಜ್ಞಾನದೊಂದಿಗೆ ಮೇಲಾಧಿಕಾರಿಗಳೊಂದಿಗೆ ವ್ಯವಹರಿಸುವುದು ಮೇಲು. ಇಲ್ಲವಾದಲ್ಲಿ ತಲೆದಂಡ ತೆರಬೇಕಾದೀತು. ಅಕಾಲ ಆಹಾರ ಸೇವನೆಯಿಂದಾಗಿ ಅಜೀರ್ಣ ಮೊದಲಾದ ಉದರಸಂಬಂಧಿ ಆರೋಗ್ಯ ಸಮಸ್ಯೆ ಕಾಡಬಹುದು. ಆದರ್ಶ ಜೀವನ ನಡೆಸಬಯಸುವವರು ಅದರೊಂದಿಗೆ ಹಿರಿಯರ ಅನುಭವಗಳನ್ನೂ ಅಳವಡಿಸಿಕೊಳ್ಳುವುದು ಮೇಲು. ಯುವಕರು ಮಾಡಲಿರುವ ಉದ್ಯಮಕ್ಕೆ ಪಾಲಕರ ಸಂಪೂರ್ಣ ಬೆಂಬಲ ದೊರೆಯಲಿದೆ. ಬರಬೇಕಾಗಿರುವ ಬಾಕಿ ಹಣ ಇಷ್ಟರಲ್ಲೇ ಕೈಸೇರಲಿದೆ. ಚಿಕ್ಕಮಕ್ಕಳ ವಿದ್ಯಾಭ್ಯಾಸದ ಕಡೆ ವಿಶೇಷ ಗಮನವಿಡುವುದು ಉತ್ತಮ.ಆರ್ಥಿಕ ಸ್ಥಿತಿಗತಿ ಸಾಧಾರಣ. ಸೋಮ-ಬುಧ-ಶನಿ-ಶುಭ ದಿನಗಳು.

**ಮೀನ (ಪೂರ್ವಾಭಾದ್ರ 4, ಉತ್ತರಾಭಾದ್ರ, ರೇವತಿ)**
**(ದಿ.ದು.ಖ.ಝ.ಥ.ದೆ.ದೋ.ಖ.ಚ.ಚಿ.)**

ಕುಟುಂಬದಲ್ಲಿ ಬಂದಿದ್ದ ಸಮಸ್ಯೆಯನ್ನು ಸುಲಭವಾಗಿ ಬಗೆಹರಿಸಿದ ರೀತಿಯ ಬಗ್ಗೆ ಎಲ್ಲರೂ ಮೆಚ್ಚುಗೆ ವ್ಯಕ್ತಪಡಿಸುವರು. ಸಮಾಜ ಸೇವೆಯಲ್ಲಿ ತೊಡಗಿಕೊಂಡವರ ಘನತೆ ಹೆಚ್ಚಾಗಲಿದೆ. ಚಿತ್ರಕಲಾವಿದರ ಕಲೆಗಳಿಗೆ ಉತ್ತಮ ಬೆಲೆ ದೊರೆಯುವುದು.ರಾಜಕಾರಣಿಗಳು ತಮ್ಮ ಚಾಣಾಕ್ಷತನದಿಂದ, ಪಕ್ಷದ ವರಿಷ್ಠರ ಮೇಲೆ ಪ್ರಭಾವ ಬೀರುವರು.ಪತ್ರಿಕೋದ್ಯಮದಲ್ಲಿ ಕೆಲಸ ಮಾಡುವವರಿಗೆ ಸರ್ಕಾರದಿಂದ ಹೆಚ್ಚಿನ ಸೌಲಭ್ಯಗಳು ಸಿಗಲಿವೆ. ವಾಹನ ಖರೀದಿ ಮಾಡುವ ಮುನ್ನ ಮತ್ತೊಮ್ಮೆ ಆಲೋಚಿಸುವುದು ಮೇಲು. ಮಹಿಳೆಯರಿಗೆ ಉತ್ತಮ ದಿನಗಳಿವೆಯಾದರೂ, ಅಮೂಲ್ಯ ವಸ್ತುಗಳ ಬಗ್ಗೆ ಎಚ್ಚರದಿಂದಿರುವುದು ಮೇಲು. ತೀರ್ಥಕ್ಷೇತ್ರಗಳ ದರ್ಶನ ಭಾಗ್ಯ ಒದಗಿಬರಲಿದೆ. ಆದಾಯದಲ್ಲಿ ಹೆಚ್ಚಳ, ಭಾನು-ಬುಧ-ಗುರು-ಶುಭ ದಿನಗಳು.

**ವಿಶೇಷ ದಿನಗಳು : ದಿನಾಂಕ: 1.8.2022 ನೇ ಸೋಮವಾರ ನಾಗರಚತುರ್ಥೀ ದಿನಾಂಕ: 2.8.2022 ನೇ ಮಂಗಳವಾರ ನಾಗರಪಂಚಮೀ, ಋಗ್ವೇದ ಉಪಾಕರ್ಮ. ನೂತನೈಸ್ಸಹ. ದಿನಾಂಕ:3.8.2022 ನೇ ಬುಧವಾರ ಸಿರಿಯಾಳ ಷಷ್ಠೀ.ದಿನಾಂಕ: 5.8.2022 ನೇ ಶುಕ್ರವಾರ, ವರಮಹಾಲಕ್ಷ್ಮೀವ್ರತ.**

## ವಾಯುಸೇನೆಯ ತರಬೇತಿಗೆ ಸಿದ್ಧಗಂಗಾ ಕಾಲೇಜಿನ ಹೇಮಂತ್ ಸ್ವಾಮಿ ಆಯ್ಕೆ



ದಾವಣಗೆರೆ, ಜು.30- ನಗರದ ಸಿದ್ಧಗಂಗಾ ಶಾಲೆಯ ಅಂಗಳದಲ್ಲಿ ಸಂಭ್ರಮದ ಆಚರಣೆ. ಕರ್ನಾಟಕ ಪ್ರತಿನಿಧಿಸಿ ಯುಪಿಎಸ್‌ಸಿ ಪರೀಕ್ಷೆಯಲ್ಲಿ ನ್ಯಾಷನಲ್ ಡಿಫೆನ್ಸ್ ಅಕಾಡೆಮಿಗೆ ಆಯ್ಕೆಯಾದ ಏಕೈಕ ವಿದ್ಯಾರ್ಥಿ ಸಿದ್ಧಗಂಗಾ ಪದವಿ ಪೂರ್ವ ಕಾಲೇಜಿನ ದ್ವಿತೀಯ ಪಿಯುಸಿ ವಿದ್ಯಾರ್ಥಿ ಹೇಮಂತ್ ಸ್ವಾಮಿಗೆ ಹೃದಯ ಸ್ಪರ್ಶಿ ಸನ್ಮಾನ ಮತ್ತು ಬೀಳ್ಕೊಡುಗೆ. ಸಂಸ್ಥೆಯ ಸಹಸ್ರಾರು ಮಕ್ಕಳು ಅಭಿಮಾನದಿಂದ ಹೇಮಂತ್ ಸ್ವಾಮಿಯನ್ನು ಆದರ್ಶ ರೂಪದಲ್ಲಿ ಕಂಡರು.

ವಾಯುಸೇನೆಯಲ್ಲಿ ತರಬೇತಿ ಪಡೆಯಲು ತೆರಳುತ್ತಿರುವ ತಮ್ಮ ಆತ್ಮೀಯ ಸ್ನೇಹಿತನನ್ನು ಪುಷ್ಪ ವೃಷ್ಟಿಗರೆದು ರಾಷ್ಟ್ರಧ್ವಜದ ಗೌರವ ನೀಡಿ ಬೀಳ್ಕೊಟ್ಟರು. ಜಿಲ್ಲೆಯ ಕೀರ್ತಿ ಪತಾಕೆ ಹಾರಿಸಿದ ಸಿದ್ಧಗಂಗೆಯ ಈ ಪ್ರತಿಭಾವಂತನನ್ನು ಗುರು ವೃಂದದವರು ಹಾರೈಸಿ-ಹರಸಿ ಕಳುಹಿಸಿಕೊಟ್ಟರು.

ದೇಶದಾದ್ಯಂತ ಪರೀಕ್ಷೆ ಬರೆದ 8 ಲಕ್ಷ ಅಭ್ಯರ್ಥಿಗಳಲ್ಲಿ 8 ಸಾವಿರ ಅಭ್ಯರ್ಥಿಗಳು ದ್ವಿತೀಯ ಹಂತಕ್ಕೆ ಬರುತ್ತಾರೆ. ಇದರಲ್ಲಿ 250 ಅಭ್ಯರ್ಥಿಗಳು ತೃತೀಯ ಹಂತಕ್ಕೆ ಬರುತ್ತಾರೆ. ಅಂತಿಮ ಆಯ್ಕೆಯಲ್ಲಿ 81 ಅಭ್ಯರ್ಥಿಗಳು ಉಳಿಯುತ್ತಾರೆ. ಆ 81 ಅದೃಷ್ಟವಂತರಲ್ಲಿ ಹೇಮಂತ್ ಸ್ವಾಮಿ ಒಬ್ಬರು ಎಂಬುದು ಆತನ ನಿರಂತರ ಪ್ರಯತ್ನ, ಸತತ ಪರಿಶ್ರಮದ ಪ್ರತಿಫಲ. ಅಪರೂಪದ ಈ ಸಾಧನೆಯನ್ನು ಕಂಪ್ಯೂಟರ್ ವಿಭಾಗದ ಪ್ರಾಧ್ಯಾಪಕ ನಫೀಸ್ ವಿವರಿಸಿದರು.

ಪ್ರಾಚಾರ್ಯ ನಿರಂಜನ್, ನಿರ್ದೇಶಕ ಡಾ|| ಜಯಂತ್, ಹಿರಿಯ ಉಪನ್ಯಾಸಕರಾದ ಎಲ್. ವಿ.ಸುಬ್ರಹ್ಮಣ್ಯ, ಸಿದ್ದಪ್ಪ, ನರಸಿಂಹ, ಲಕ್ಷ್ಮಿನಾರಾಯಣ, ಜಯಣ್ಣ ಇಟಗಿ, ಪ್ರದೀಪ್, ಸದಾಶಿವ ಹೊಳ್ಳ, ವಾಣಿಶ್ರೀ ಇವರು ಎಲ್ಲಾ ಉಪನ್ಯಾಸಕರೊಡಗೂಡಿ ಹೇಮಂತ್ ಸ್ವಾಮಿಗೆ ಶಾಲು ಹೊದಿಸಿ, ಸ್ಮರಣಿಕೆ ನೀಡಿ ಹೂ ಮಳೆಗರೆದು ಗೌರವಿಸಿದರು.

ಸಂಸ್ಥೆಯ ಮುಖ್ಯಸ್ಥರಾದ ಜಸ್ಟಿನ್ ಡಿ'ಸೌಜ, ಉಪ ಪ್ರಾಚಾರ್ಯರಾದ ಗಾಯತ್ರಿ ಚಿಮ್ಮಡ್ ಹಾಜರಿದ್ದರು. ಶಾಲಾ - ಕಾಲೇಜಿನ ಮಕ್ಕಳು ಹೇಮಂತ್ ಜೊತೆ ಫೋಟೋ ಕ್ಲಿಕ್ಕಿಸಿಕೊಳ್ಳಲು ಮುಗಿಬಿದ್ದರು. ಸಿದ್ಧಗಂಗಾ ಸಂಸ್ಥೆಯ ತನ್ನ ಸ್ನೇಹಿತರು ಮತ್ತು ಗುರು ವೃಂದವರು ನೀಡಿದ ಈ ಅವಿಸ್ಮರಣೀಯ ಗೌರವವನ್ನು ತಾನು ಎಂದೂ ಮರೆಯುವುದಿಲ್ಲವೆಂದು ಕೃತಜ್ಞತೆ - ವಿನಯದಿಂದ ಹೇಮಂತ್ ಸ್ವಾಮಿ ಎಲ್ಲರನ್ನೂ ವಂದಿಸಿದರು.

## ಪತ್ರಕರ್ತರ ಸೇವೆಯೂ ಸ್ಮರಣೀಯ

### ಹರಪನಹಳ್ಳಿ ಪತ್ರಕರ್ತರ ಪದಗ್ರಹಣ ಸಮಾರಂಭದಲ್ಲಿ ಕರುಣಾಕರ ರೆಡ್ಡಿ



ಹರಪನಹಳ್ಳಿ, ಜು.30- ಸಮಾಜದಲ್ಲಿ ವೈದ್ಯರಂತೆ ಕಾರ್ಯನಿರ್ವಹಿಸುತ್ತಿರುವ ಪತ್ರಕರ್ತರ ಸೇವೆಯೂ ಸ್ಮರಣೀಯವಾದದ್ದಾಗಿದೆ ಎಂದು ಶಾಸಕ ಜಿ.ಕರುಣಾಕರ ರೆಡ್ಡಿ ಹೇಳಿದರು.

ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಸಭಾಂಗಣದಲ್ಲಿ ಕಾರ್ಯನಿರತ ಪತ್ರಕರ್ತರ ಸಂಘದಿಂದ ಆಯೋಜಿಸಿದ್ದ ಪತ್ರಿಕಾ ದಿನಾಚರಣೆ, ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದವರಲ್ಲಿ ಪತ್ರಕರ್ತರೂ ಸೇರಿದ್ದಾರೆ, ನಾನೂ ಕೂಡ 1996ರಲ್ಲಿ ಬಳ್ಳಾರಿಯ'ಈ ನಮ್ಮ ಕನ್ನಡ ನಾಡು' ಪತ್ರಿಕೆಯ ಸಂಪಾದಕೀಯ ಕೆಲಸ ಮಾಡುತ್ತಿರುವಾಗ ಪತ್ರಕರ್ತರ ಬವಣೆಗಳನ್ನು ಅರಿತಿದ್ದೇನೆ, ಇಂದಿನ ಸ್ಪರ್ಧಾತ್ಮಕ ಹಾಗೂ ತಾಂತ್ರಿಕ ಯುಗದಲ್ಲಿ ಪತ್ರಿಕಾ ಮಾಧ್ಯಮ ಬದಲಾಗುತ್ತಿದೆ, ಇಲ್ಲಿ ಯಾವುದಕ್ಕೆ ಆದ್ಯತೆಯನ್ನು ಕೊಡಬೇಕು, ಕೊಡಬಾರದು ಎನ್ನುವುದನ್ನು ಪತ್ರಕರ್ತರು ಗಮನಿಸಬೇಕು ಎಂದು ಕಿವಿಮಾತು ಹೇಳಿದರು.

ಮುದ್ರಣ ಮಾಧ್ಯಮದಲ್ಲಿ ಪೈಪೋಟಿ ಇಲ್ಲ, ಇದು ಸಾಕ್ಷಿಗೆ ಅವಕಾಶವಿದ್ದು, ಪತ್ರಕರ್ತರು ಸರ್ಕಾರದ, ಜನಸಾಮಾನ್ಯರ, ಜನಪ್ರತಿನಿಧಿಗಳ ನ್ಯೂನತೆಗಳನ್ನು ಎತ್ತಿ ತೋರಿಸುವ ಕೆಲಸ ಮಾಡುತ್ತದೆ, ಇದರ ಜತೆಗೆ ವಾಸ್ತವಾಂಶ ಬರೆಯಬೇಕು, ಕಾಯಕದಲ್ಲಿ ನಿಷ್ಠೆ ಇರಬೇಕು ಎಂದ ಅವರು, ಪತ್ರಿಕಾ ಮಿತ್ರರಿಗೆ ನಿವೇಶನ ಕೊಡಿಸುವ ಕೆಲಸ ಮಾಡುತ್ತೇನೆ ಎಂದರು.

ಡಿವೈಎಸ್ಪಿ ಹಾಲುಮೂರ್ತಿರಾವ್ ಮಾತನಾಡಿ, ಸಮಾಜದ ಅಂಕು-ಡೊಂಕುಗಳನ್ನು ತಿದ್ದಲು ಅವಕಾಶವಿದೆ. ಹಿಂದೆ ಕೇವಲ ಮುದ್ರಣ ಮಾಧ್ಯಮ ಮಾತ್ರ ಇತ್ತು, ಇಂದು ಸಾಮಾಜಿಕ ಜಾಲತಾಣ ಕೂಡ ಸೇರಿಕೊಂಡಿದ್ದು, ಸಾರ್ವಜನಿಕರು ಪತ್ರಿಕೆ ಓದುವುದರ ಮೂಲಕ ತಮ್ಮ ಜ್ಞಾನವನ್ನು ಹೆಚ್ಚಿಸಿಕೊಳ್ಳಬೇಕು ಎಂದರು.

ಪುರಸಭೆ ಅಧ್ಯಕ್ಷ ಹೆಚ್.ಎಂ. ಅಶೋಕ, ಬಿಇಓ ಯು. ಬಸವರಾಜಪ್ಪ ಹಾಗೂ ಮುಖ್ಯಾಧಿಕಾರಿ ಶಿವಕುಮಾರ್ ಎರಗುಡಿ ಮಾತನಾಡಿದರು.

ನಾಟೀ ಕೀಲು, ಮೂಳೆ ತಜ್ಞ ಪಂಡಿತ ಬಿ.ಬಿ.ಹೊಸೂರಪ್ಪ, ನೂತನವಾಗಿ ಆಯ್ಕೆಯಾಗಿರುವ ಪುರಸಭೆ ಅಧ್ಯಕ್ಷ ಎಚ್.ಎಂ.ಅಶೋಕ ಹಾಗೂ ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಪಿಯು ಕಾಲೇಜು ಪ್ರಾಚಾರ್ಯ ವೆಂಕಟೇಶ್, ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ತಳವಾರ ಚಂದ್ರಪ್ಪ, ಪ್ರಧಾನ ಕಾರ್ಯದರ್ಶಿ ಹೆಚ್.ದೇವೆಂದ್ರಪ್ಪ, ಜಿಲ್ಲಾ ಉಪಾಧ್ಯಕ್ಷ ಬಿ.ರಾಮಪ್ರಸಾದ ಗಾಂಧಿ, ಖಜಾಂಚಿ ಎಂ.ಸುರೇಶ್, ಸಂಘದ ಪದಾಧಿಕಾರಿಗಳಾದ ಹೆಚ್. ಎ. ಸುರೇಂದ್ರ ಬಾಬು, ಕೆ.ಉಚ್ಚೆಂಗೆಪ್ಪ, ಬಿ.ಮಾಧವರಾವ್, ಟಿ.ಬಿ.ರಾಜು, ಪಿ.ಕರಿಬಸಪ್ಪ, ಡಿ. ವಿಶ್ವನಾಥ, ಸಿ.ನಾಗರಾಜ ನಾಯ್ಕ, ಎನ್.ರವಿ, ಎ.ನಾಗೇಂದ್ರಪ್ಪ, ದೇವರಾಜ, ವೆಂಕಟಪತಿರಾಜ, ಪರಶುರಾಮ, ಕೆ.ಬಸವರಾಜ ಸೇರಿದಂತೆ, ಇತರರು ಇದ್ದರು.

## ಕ್ಷತ್ರಿಯ ಮರಾಠ ಪರಿಷತ್‌ನಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ದಾವಣಗೆರೆ, ಜು.30- ಕರ್ನಾಟಕ ಕ್ಷತ್ರಿಯ ಮರಾಠ ಪರಿಷತ್ ಜಿಲ್ಲಾ ಘಟಕದ ವತಿಯಿಂದ 2021-22ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಎಸ್ಸೆಸ್ಸೆಲ್ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ.70 ಕ್ಕೂ ಹೆಚ್ಚು ಅಂಕ ಗಳಿಸಿ ಉತ್ತೀರ್ಣರಾದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪರಿಷತ್ ವತಿಯಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಿದ್ದು, ಹೆಸರು ನೋಂದಾಯಿಸಲು ಆಗಸ್ಟ್ 5 ಕಡೆಯ ದಿನವಾಗಿದೆ.

ಅರ್ಹ ವಿದ್ಯಾರ್ಥಿಗಳು ಹೆಚ್ಚಿನ ಮಾಹಿತಿಗೆ ಕೃಷ್ಣರಾವ್ ಸಾವಂತ್ ಮೊ: 9342514779, ಚೇತನ ಶಿವಕುಮಾರ್ ಮೊ: 9731289333, ಹನುಮಂತರಾವ್ ಸುರ್ವೆ ಮೊ:7019178175 ಟೀಕೋಜಿರಾವ್ ಹರಿಹರ ಮೊ: 63623 20831, ಸತೀಶ್‌ರಾವ್ ಚನ್ನಗಿರಿ ಮೊ:87622 89309, ಅಣ್ಣೋಜಿರಾವ್ ಕಣಿವೆಬಿಳಚಿ ಮೊ: 9449285481, ಗಜೇಂದ್ರ ಸಿಂಧೆ ಕತ್ತಲಗೆರೆ ಮೊ:9480566890, ಲಕ್ಷ್ಮಣರಾವ್ ಹರಪನಹಳ್ಳಿ ಮೊ: 9916828264 ಸಂಪರ್ಕಿಸುವಂತೆ ಜಿಲ್ಲಾಧ್ಯಕ್ಷ ಜಿ.ಹೆಚ್. ಮರಿಯೋಜಿರಾವ್ ತಿಳಿಸಿದ್ದಾರೆ.

## ಕುರುಹಿನಶೆಟ್ಟಿ ಸಮಾಜದಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ

ದಾವಣಗೆರೆ, ಜು. 30- ಕುರುಹಿನ ಶೆಟ್ಟಿ (ನೇಕಾರ) ಸಮಾಜ ಸಂಘದಿಂದ 2021-22 ನೇ ಸಾಲಿನಲ್ಲಿ ಎಸ್ಸೆಸ್ಸೆಲ್ಸಿ ಹಾಗೂ ದ್ವಿತೀಯ ಪಿಯುಸಿ ಉತ್ತೀರ್ಣರಾದ ಸಮಾಜದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ದಾವಣಗೆರೆ ನಗರದ ಸಮಾಜದ ವಿದ್ಯಾರ್ಥಿಗಳು ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ. 85 ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ. 80 ಅಂಕಗಳನ್ನು ಗಳಿಸಿದ ವಿದ್ಯಾರ್ಥಿಗಳು ತಮ್ಮ ಅಂಕಪಟ್ಟಿ, ವರ್ಗಾವಣೆ ಪತ್ರಗಳ ಜೆರಾಕ್ಸ್ ಪ್ರತಿಗಳು, ಜಾತಿಗೆ ಸಂಬಂಧಿಸಿದ ದಾಖಲೆಯೊಂದಿಗೆ ಆಗಸ್ಟ್ 22 ರೊಳಗಾಗಿ ಅಧ್ಯಕ್ಷರು, ಪ್ರಧಾನ ಕಾರ್ಯದರ್ಶಿಗಳು, ಶ್ರೀ ಕುರುಹಿನಶೆಟ್ಟಿ ಸಮಾಜ, ಶ್ರೀ ನೀಲಕಂಠೇಶ್ವರ ದೇವಸ್ಥಾನ, ಕೆಟಿಜೆ ನಗರ, 2 ನೇ ಮುಖ್ಯರಸ್ತೆ, 14 ನೇ ಕ್ರಾಸ್, ದಾವಣಗೆರೆ-2 ಈ ವಿಳಾಸಕ್ಕೆ ಆಗಸ್ಟ್ 31 ರೊಳಗೆ ತಲುಪಿಸಲು ಕೋರಲಾಗಿದೆ. ಅರ್ಜಿ ಫಾರಂಗಳಿಗೆ ಮತ್ತು ಹೆಚ್ಚಿನ ಮಾಹಿತಿಗಾಗಿ 9449293249ಗೆ ಸಂಪರ್ಕಿಸಬಹುದು.

## ವಿಜಯನಗರ ಜಿಲ್ಲೆಗೆ ಆನಂದ್ ಸಿಂಗ್

ಬೆಂಗಳೂರು, ಜು. 30 - ಪ್ರವಾಸೋದ್ಯಮ, ಪರಿಸರ ಸಚಿವ ಆನಂದ್‌ಸಿಂಗ್ ಅವರಿಗೆ ವಿಜಯನಗರ ಜಿಲ್ಲಾ ಉಸ್ತುವಾರಿ ನೀಡಿ, ಸರ್ಕಾರ ಆದೇಶ ಹೊರಡಿಸಿದೆ.

ಆನಂದ್ ಸಿಂಗ್ ಒತ್ತಡಕ್ಕೆ ಮಣಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿಜಯನಗರ ಮತ್ತು ಕೊಪ್ಪಳ ಜಿಲ್ಲೆಗಳ ಉಸ್ತುವಾರಿ ಬದಲಾವಣೆ ಮಾಡಿ, ಶಶಿಕಲಾ ಜೊಲ್ಲೆಗೆ ಕೊಪ್ಪಳ ಜಿಲ್ಲೆ ಉಸ್ತುವಾರಿ ವಹಿಸಿದ್ದಾರೆ. ಸ್ವಂತ ಜಿಲ್ಲೆಗಳಿಗೆ ಸಚಿವರ ಉಸ್ತುವಾರಿ ಬೇಡ ಎಂದು ವರಿಷ್ಠರ ಆದೇಶ ಮಾಡಿದ್ದರೂ, ಅದನ್ನು ಧಿಕ್ಕರಿಸಿದ ಆನಂದ್‌ಸಿಂಗ್ ತಮಗೆ ವಿಜಯನಗರ ಜಿಲ್ಲೆ ಬೇಕೆಂದು ಪಟ್ಟು ಹಿಡಿದು, ಅದನ್ನು ಪಡೆದುಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ.

## ಅಗ್ನಿಪಥ ನೇಮಕಾತಿ ರ್‍ಯಾಲಿ

ದಾವಣಗೆರೆ, ಜು.30- ಸೇನೆಗೆ ಸೇರ ಬಯಸುವ ಅಗ್ನಿಪಥ ನೇಮಕಾತಿ ರ್‍ಯಾಲಿಯು ಹಾವೇರಿ ಜಿಲ್ಲೆಯಲ್ಲಿ ನಡೆಯಲಿದ್ದು, ಬಾಗಲಕೋಟೆ, ವಿಜಯಪುರ, ಧಾರವಾಡ, ಉತ್ತರಕನ್ನಡ, ದಕ್ಷಿಣ ಕನ್ನಡ, ಉಡುಪಿ, ದಾವಣಗೆರೆ, ಗದಗ, ಹಾವೇರಿ, ಚಿಕ್ಕಮಗಳೂರು ಮತ್ತು ಶಿವಮೊಗ್ಗ ಜಿಲ್ಲೆಗಳಿಗೆ ಅಭ್ಯರ್ಥಿಗಳಿಗೆ ಸಂಬಂಧಿಸಿದಂತೆ ರ್‍ಯಾಲಿಯು ಸೆಪ್ಟಂಬರ್ 1 ರಿಂದ 20 ಸೆಪ್ಟಂಬರ್ 2022 ರವರೆಗೆ ನಡೆಯಲಿದ್ದು ಈಗಾಗಲೇ ಜಾಲತಾಣ www.joinindianarmy.nic.in ನಲ್ಲಿ ಪ್ರಕಟಿಸಲಾಗಿದೆ ಎಂದು ನೇಮಕಾತಿ ವಿಭಾಗ ಡೈರೆಕ್ಟರ್ ಅಂಜುಗುಪ್ತ ತಿಳಿಸಿದ್ದಾರೆ.

## ರಾಜ್ಯಮಟ್ಟದ ಕವನ ಸ್ಪರ್ಧೆ

ದಾವಣಗೆರೆ,ಜು.30- ನಗರದ ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯ ಆಶ್ರಯದಲ್ಲಿ ರಾಜ್ಯಮಟ್ಟದ ಉಚಿತ ಕವನ ಸ್ಪರ್ಧೆ ಹಮ್ಮಿಕೊಳ್ಳಲಾಗಿದೆ ಎಂದು ಸಂಸ್ಥೆಯ ಸಂಸ್ಥಾಪಕ ಸಾಲಿಗ್ರಾಮ ಗಣೇಶ್ ಶೆಣೈ ತಿಳಿಸಿದ್ದಾರೆ.

ವಿಷಯ 'ಸ್ವಾತಂತ್ರ್ಯ ದಿನಾಚರಣೆ' ಅಥವಾ 'ಸ್ವಾತಂತ್ರ್ಯ ಅಮೃತ ಮಹೋತ್ಸವ' ಒಬ್ಬರಿಗೆ ಒಂದು ಕವನ ಬರೆಯಲು ಮಾತ್ರ ಅವಕಾಶ. 20 ರಿಂದ 25 ಸಾಲುಗಳಿಗೆ ಮೀರದಂತೆ ಕವನ ಬರೆದು ಆಗಸ್ಟ್ 10 ರೊಳಗೆ # 2461/90, 'ಶಿವ ಸನ್ನಿಧಿ', ಎಸ್.ಎಸ್.ಬಡಾವಣೆ, 'ಎ' ಬ್ಲಾಕ್, ಅಥಣಿ ಕಾಲೇಜು ರಸ್ತೆ, ದಾವಣಗೆರೆ - 577 004. ಈ ವಿಳಾಸಕ್ಕೆ ಕಳಿಸಬಹುದು.

## ನಗರದಲ್ಲಿಂದು ಛಲವಾದಿ ಮಹಾಸಭಾದ ಸಭೆ

ಜಿಲ್ಲಾ ಛಲವಾದಿ ಮಹಾಸಭಾದ ವಾರ್ಷಿಕ ಮಹಾಸಭೆಯು ಇಂದು ಬೆಳಿಗ್ಗೆ 11 ಗಂಟೆಗೆ ಜಿಲ್ಲಾ ಛಲವಾದಿ ಸಮುದಾಯ ಭವನದಲ್ಲಿ ಸಮಾಜದ ಅಧ್ಯಕ್ಷ ಎಸ್.ಶೇಖರಪ್ಪ ಅವರ ಅಧ್ಯಕ್ಷತೆಯಲ್ಲಿ ನಡೆಯಲಿದೆ.


**ಸ್ಕೊನೊವೇಟ್ ಅಕಾಡೆಮಿ**

**Nursery teacher Training**
**NTT**

ವಿದ್ಯಾವಂತ ಮಹಿಳೆಯರಿಗೊಂದು ಸುವರ್ಣ ನರ್ಸರಿ ಶಿಕ್ಷಕಿಯಾಗುವ ಅವಕಾಶ.

**ವಿದ್ಯಾರ್ಹತೆ :**
PUC, Any Degree

ISO ಪ್ರಮಾಣೀಕರಿಸಿದ ಪ್ರಮಾಣ ಪತ್ರ ಹಾಗೂ 100% ಉದ್ಯೋಗ ಅವಕಾಶ ನೀಡಲಾಗುವುದು.

ಹೆಚ್ಚಿನ ಮಾಹಿತಿಗಾಗಿ.
**95354 33199, 73536 39111**



**ಬೇಕಾಗಿದ್ದಾರೆ**

2022-23ನೇ ಶೈಕ್ಷಣಿಕ ಸಾಲಿಗೆ ದಾವಣಗೆರೆಯಲ್ಲಿರುವ ಪದವಿ ಕಾಲೇಜಿಗೆ ಈ ಕೆಳಕಂಡ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಇಚ್ಛೆಯುಳ್ಳವರು ಈ ಕೆಳಗಿನ ಈಮೇಲ್‌ಗೆ ತಮ್ಮ ವೈಯಕ್ತಿಕ ವಿವರಗಳನ್ನು ಕಳುಹಿಸುವುದು.

| ಹುದ್ದೆ | ವಿದ್ಯಾರ್ಹತೆ |
|---|---|
| 1. ಉಪ ಪ್ರಾಂಶುಪಾಲರು | ಎಂ.ಕಾಂ/ಎಂ.ಸಿ.ಎ.ಜೊತೆಗೆ ನೆಟ್/ಸ್ಲೆಟ್/ಪಿಹೆಚ್.ಡಿ. |
| 2. ಸಹಾಯಕ ಪ್ರಾಧ್ಯಾಪಕರು | ಎ.ಕಾಂ/ಎಂ.ಸಿ.ಎ ಜೊತೆಗೆ ನೆಟ್ /ಸ್ಲೆಟ್ |
| 3. ಗ್ರಂಥಪಾಲಕರು | ಎಂ.ಲಿಬ್‌ಸೈನ್ಸ್ ಜೊತೆಗೆ ನೆಟ್ / ಸ್ಲೆಟ್ |
| 4. ಅಟೆಂಡರ್ (ಪುರುಷರಿಗೆ ಆದ್ಯತೆ) | ಓದು, ಬರಹ ಬಲ್ಲವರು |

**Email id : Jobonline6789@gmail.com**



**LADIES PG BUILDING FOR RENT**


ಸುಸಜ್ಜಿತವಾದ ಮಹಿಳಾ ವಸತಿ ನಿಲಯ ಬಾಡಿಗೆಗಿದೆ.
S.N. Layout Davangere.
**Mobi.: 95351 14063**
**96203 71544 97428 35642**



**ಅರಸಿ ಕನ್ಸಲ್ಟೆನ್ಸಿ ಸರ್ವೀಸಸ್**

ನಮ್ಮಲ್ಲಿ ಕಟ್ಟಡ ಪರವಾನಿಗೆ (ದಾವಣಗೆರೆ ಮಹಾನಗರ ಪಾಲಿಕೆ ಮತ್ತು DHUDA), ಬಿಲ್ಡಿಂಗ್ ಪ್ಲಾನ್ (ವಾಸ್ತು ಪ್ರಕಾರ), ಎಸ್ಟಿಮೇಷನ್, ಕನ್‌ಸ್ಟ್ರಕ್ಷನ್ ಮತ್ತು ಮೆಟೀರಿಯಲ್ ಕಾಂಟ್ರ್ಯಾಕ್ಟ್ ಹಾಗೂ ಆಲಿನೇಷನ್, ಲೇಔಟ್ ಪ್ಲಾನ್ ಮತ್ತು ಅಭಿವೃದ್ಧಿ (Development) ಮಾಡಿಕೊಡಲಾಗುವುದು.

ಸಂಪರ್ಕಿಸಿ : **ಪ್ರಿಯಾಂಕ ಜಿ.ಪಿ., ಇಂಜಿನಿಯರ್**
**+91 70190 70400**
**8ನೇ ಮೇನ್, 8ನೇ ಕ್ರಾಸ್, ಬ್ಯಾಡಗಿ ಶೆಟ್ರು ಸ್ಕೂಲ್ ಹತ್ತಿರ, ಪಿ.ಜೆ. ಬಡಾವಣೆ, ದಾವಣಗೆರೆ-4.**


**ಮಾನ್ಯ ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ ಪಿ.ಆಂಡ್ ಎಸ್.ಸಿ.ನಂ.09/2022**

ಅರ್ಜಿದಾರರು : **ಶ್ರೀಮತಿ ಸುಲೋಚಮ್ಮ ಎಲ್. ಕೋಂ. ಲೇಟ್ ರೇವಣ್ಣ ಎಲ್.** ವಯಸ್ಸು ಸುಮಾರರು 69 ವರ್ಷ, ವಾಸ : #2/36, ಆಂಜನೇಯ ಸ್ವಾಮಿ ದೇವಸ್ಥಾನ ರಸ್ತೆ, ಚಾಮುಂಡೇಶ್ವರಿ ಟಾಕೀಸ್ ಹಿಂಭಾಗ, ಆಂಜನೇಯ ಹೊಸ ಬಡಾವಣೆ, ನಿಟ್ಟುವಳ್ಳಿ, ದಾವಣಗೆರೆ.

ವಿರುದ್ಧ

ಎದುರುದಾರರು : 1.**ಶ್ರೀಮತಿ ಶೈಲಜ ಎಲ್. ಕೋಂ ಲೇಟ್ ರೇವಣ್ಣ ಎಲ್.** ವಯಸ್ಸು ಸುಮಾರು 37 ವರ್ಷ, 2. ಕು|| ತೇಜಸ್ವಿನಿ ಬಿನ್ ಲೇಟ್ ರೇವಣ್ಣ ಎಲ್. ವಯಸ್ಸು ಸುಮಾರು 7 ವರ್ಷ, 2ನೇ ಎದುರುದಾರರು ಮೈನರ್ ಇದ್ದು, ಅವರ ಪರವಾಗಿ ಅವರ ಮೈನರ್ ಗಾರ್ಡಿಯನ್ ಆಗಿ ಖಾಸಾ ತಾಯಿ ಶ್ರೀಮತಿ ಶೈಲಜ ಎಲ್. ಇರುತ್ತಾರೆ. ಮೇಲ್ಕಂಡ 1 & 2ನೇಯವರ ವಾಸ : #2/36, ಆಂಜನೇಯ ಸ್ವಾಮಿ ದೇವಸ್ಥಾನ ರಸ್ತೆ, ಚಾಮುಂಡೇಶ್ವರಿ ಟಾಕೀಸ್ ಹಿಂಭಾಗ, ಆಂಜನೇಯ ಹೊಸ ಬಡಾವಣೆ, ನಿಟ್ಟುವಳ್ಳಿ, ದಾವಣಗೆರೆ.

**ಆದೇಶ 5 ನಿಯಮ 20ರ ವ್ಯವಹಾರ ಪ್ರಕ್ರಿಯಾ ಸಂಹಿತೆ ಪ್ರಕಾರ ಸಮನ್ಸ್**

ಈ ಮೇಲ್ಕಂಡ ಅರ್ಜಿಯನ್ನು ಅರ್ಜಿದಾರರು ತಮ್ಮ ಗಂಡ ರೇವಣ್ಣ ಎಲ್.ಇವರು ಮರಣ ಹೊಂದಿರುವುದರಿಂದ ಅವರಿಗೆ ಸಂಬಂಧಪಟ್ಟ ಕೆನರಾ ಬ್ಯಾಂಕ್, ಪಿ.ಬಿ ರಸ್ತೆ ಶಾಖೆ, ದಾವಣಗೆರೆಯಲ್ಲಿ ಇಟ್ಟಿರುವ ನಂ.ಕೆ.ಎಫ್.256440 ರೂ. 5,00,000/- ಮತ್ತು ನಂ. ಕೆ.ಜೆ.723160 ರೂ.5,00,000/-ಗಳ ಎರಡು ನಿಶ್ಚಿತ ಠೇವಣಿಗಳನ್ನು ಮತ್ತು ಕೆನರಾ ಬ್ಯಾಂಕ್ ಪಿ.ಬಿ ರಸ್ತೆ ಶಾಖೆ, ದಾವಣಗೆರೆಯಲ್ಲಿರುವ ಉಳಿತಾಯ ಖಾತೆಯಲ್ಲಿರುವ ಹಾಲಿ ಹಣವನ್ನು ಪಡೆಯಲು ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ ಬೇರೆ ಯಾರಾದರೂ ವಾರಸುದಾರರಿದ್ದಲ್ಲಿ ದಿನಾಂಕ 11.8.2022ರಂದು 11 ಗಂಟೆಗೆ ಮೇಲ್ಕಂಡ ನ್ಯಾಯಾಲಯದಲ್ಲಿ ಬಂದು ತಮ್ಮ ತಕರಾರನ್ನು ಸಲ್ಲಿಸಬಹುದು. ತಪ್ಪಿದಲ್ಲಿ ಮೇಲ್ಕಂಡ ಅರ್ಜಿಯನ್ನು ಏಕಪಕ್ಷೀಯವಾಗಿ ತೀರ್ಮಾನ ಮಾಡಲಾಗುವುದು.

ನ್ಯಾಯಾಲಯದ ಮೊಹರು ಹಾಗೂ ನನ್ನ ಸಹಿಯೊಂದಿಗೆ ದಿನಾಂಕ 29.7.2022ರಂದು ನೀಡಲಾಗಿದೆ.

**(ಎಂ.ಎಸ್. ರಾಜಕುಮಾರ್)**
ಅರ್ಜಿದಾರರ ಪರ ವಕೀಲರು

ಸ್ಥಳ : ದಾವಣಗೆರೆ
ದಿನಾಂಕ : 13.7.2022

**ನ್ಯಾಯಾಲಯದ ಆದೇಶದ ಮೇರೆಗೆ,**
ಶಿರಸ್ತೇದಾರರು
ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

## ಭೂಮಿ ಕೊಡೆವು

**(1ನೇ ಪುಟದಿಂದ)** ಜನಪ್ರತಿನಿಧಿಗಳ ಈ ನಿರ್ಣಯಕ್ಕೆ ತೀವ್ರ ವಿರೋಧ ವ್ಯಕ್ತವಾಗುತ್ತಿದೆ. ಪ್ರಾಣ ಕೊಟ್ಟೇವು, ಜೀವನಕ್ಕೆ ಆಧಾರವಾಗಿರುವ ಫಲವತ್ತಾದ ಭೂಮಿ ಕೊಡುವುದಿಲ್ಲ ಎಂದು ರೈತರು ಪಣ ತೊಟ್ಟಿದ್ದಾರೆ.

ತಾಲ್ಲೂಕಿನ ಮೆಳ್ಳೇಕಟ್ಟೆ ಗ್ರಾಮದ ರೈತರ ಶೇ.90ರಷ್ಟು ಅಂದರೆ ಸುಮಾರು 900 ಎಕರೆ ಜಮೀನು, ಉಳಿದಂತೆ ಅಣಜಿ ಹಾಗೂ ಲಿಂಗಾಪುರ ರೈತರ ಜಮೀನು ವಶಕ್ಕೆ ನೋಟಿಸ್ ನೀಡಿದ ಬೆನ್ನಲ್ಲೇ ಜಮೀನು ಉಳಿಸಿಕೊಳ್ಳಲು ಪ್ರತಿಭಟನೆಗೆ ಮುಂದಾಗಿದ್ದಾರೆ.

ಸರ್ಕಾರ ವಶ ಪಡಿಸಿಕೊಳ್ಳಲು ಮುಂದಾಗಿರುವ ಭೂಮಿ ಫಲವತ್ತಾಗಿರುವುದು. ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ ಕಳುಹಿಸಿರುವ ನೋಟಿಸ್‌ಗೆ ಈಗಾಗಲೇ ಎಲ್ಲಾ ರೈತರು ಆಕ್ಷೇಪಣೆ ಸಲ್ಲಿಸಿದ್ದಾರೆ. ಬಹುತೇಕ ರೈತರು ತಮ್ಮ ಮೂರ್ನಾಲ್ಕು ಎಕರೆ ಜಮೀನು ಜೀವನಕ್ಕೆ ಆಧಾರವಾಗಿದೆ. ಒಂದು ವೇಳೆ ಸರ್ಕಾರ ಭೂಮಿ ಸ್ವಾಧೀನ ಪಡಿಸಿಕೊಂಡಿದ್ದೇ ಆದಲ್ಲಿ ಗ್ರಾಮದ ರೈತರೆಲ್ಲರೂ ಊರು ಖಾಲಿ ಮಾಡಬೇಕಾಗುತ್ತದೆ ಎಂದು ರೈತರು ಆತಂಕ ವ್ಯಕ್ತಪಡಿಸಿದ್ದಾರೆ.

ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ ಅವರ ಅವಿರತ ಶ್ರಮದಿಂದಾಗಿ 22 ಕೆರೆ ಏತ ನೀರಾವರಿ ಯೋಜನೆಯಡಿ ಅಣಜಿ ಕೆರೆಗೆ ನೀರು ಹರಿದಿತ್ತು. ಇದರಿಂದಾಗಿ ಅಂತರ್ಜಲವೂ ಹೆಚ್ಚಾಗಿತ್ತು. ರೈತರು ಬೋರ್‌ವೆಲ್ ಕೊರೆಸಿ ಅಡಿಕೆ ತೋಟ ಮಾಡಿಕೊಂಡಿದ್ದರು. ಸದ್ಯ ವಶಕ್ಕೆ ಮುಂದಾಗಿರುವ ಪ್ರದೇಶದಲ್ಲಿ ಶೇ.25ರಷ್ಟು ಫಲಕ್ಕೆ ಬಂದ ಅಡಿಕೆ ತೋಟ ಇರುವುದಾಗಿ ರೈತರು ಹೇಳಿದ್ದಾರೆ.

ನಮ್ಮದು ಮಳೆಯಾಶ್ರಿತ ಫಲವತ್ತಾದ ಭೂಮಿ. ಬಾಳೆ, ಮೆಕ್ಕೆಜೋಳ, ಬಿಳಿಜೋಳ ಸೇರಿದಂತೆ ಬೆಳೆ ಬೆಳೆಯುತ್ತಿದ್ದೇವೆ. ಜನಪ್ರತಿನಿಧಿಗಳು, ಅಧಿಕಾರಿಗಳು ಬಂದು ಬೇಕಾದರೆ ಭೂಮಿ ಪರೀಕ್ಷಿಸಲಿ. ಕೃಷಿಯನ್ನೇ ನಂಬಿಕೊಂಡ ನಾವು ಎಲ್ಲಿಗೆ ಹೋಗಬೇಕು? ಮಾನವೀಯತೆ, ಮನಸ್ಸಾಕ್ಷಿ ಇದ್ದರೆ ನಮ್ಮನ್ನು ಭೂಮಿಯಿಂದ ಬೇರ್ಪಡಿಸಬೇಡಿ ಎಂದು ಕಿಡಿಕಾರಿರುವ ರೈತರು, ಎಲ್ಲಾ ರೈತರು ಸಂಘಟಿತರಾಗಿ ಹೋರಾಟ ನಡೆಸುತ್ತೇವೆ. ಯಾವ ಕಾರಣಕ್ಕೂ ಭೂಮಿ ಬಿಟ್ಟುಕೊಡುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

## ಮಾಗಿ ಕುಟುಂಬದಿಂದ ಧರ್ಮಸ್ಥಳಕ್ಕೆ ಅಕ್ಕಿ



ದಾವಣಗೆರೆ, ಜು.30- ನಗರದ ಅಕ್ಕಿ ವರ್ತಕರಾದ ರೈಸ್ ಕಾರ್ನರ್, ಹರ್ಷ ಕಮರ್ಷಿಯಲ್ಸ್, ಜೆ.ಪಿ. ಎಂಟರ್‌ಪ್ರೈಸಸ್ ಇವರ ಸಂಯುಕ್ತಾಶ್ರಯದಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳಕ್ಕೆ ಎರಡನೇ ವರ್ಷದ ಅಕ್ಕಿಯನ್ನು ಸಮರ್ಪಿಸಲಾಯಿತು.

ರೈಸ್ ಕಾರ್ನರ್ ಮಾಲೀಕರಾಗಿದ್ದ ದಿ. ಶ್ರೀಮತಿ ಬಸಮ್ಮ ಮಾಗಿ ಮತ್ತು ದಿ. ವೀರಬಸಪ್ಪ ಮಾಗಿ ದಂಪತಿ ಸ್ಮರಣಾರ್ಥ ಅವರ ಕುಟುಂಬದಿಂದ 1 ಲೋಡ್ ಅಕ್ಕಿಯನ್ನು ಧರ್ಮಸ್ಥಳಕ್ಕೆ ಕಳುಹಿಸಲಾಯಿತು.

ಈ ಸಂಬಂಧ ಹಳೆಪೇಟೆಯ ಶ್ರೀ ವೀರಭದ್ರೇಶ್ವರ ದೇವಸ್ಥಾನದ ಆವರಣದಲ್ಲಿ ಇಂದು ಬೆಳಿಗ್ಗೆ ನಡೆದ ಸರಳ ಪೂಜಾ ಸಮಾರಂಭವನ್ನು ವೀರಶೈವ ಮಹಾಸಭಾದ ಜಿಲ್ಲಾಧ್ಯಕ್ಷ ದೇವರಮನಿ ಶಿವಕುಮಾರ್ ಅವರು ನೆರವೇರಿಸುವುದರ ಮೂಲಕ ಅಕ್ಕಿ ಲೋಡ್‌ಗೆ ಚಾಲನೆ ನೀಡಿದರು.

ದಿ. ವೀರಬಸಪ್ಪ ಮಾಗಿ ಅವರ ಪುತ್ರರೂ ಆದ ವೀರಶೈವ ಮಹಾಸಭಾದ ಜಿಲ್ಲಾ ಕಾರ್ಯದರ್ಶಿ ಜಯಪ್ರಕಾಶ್ ಮಾಗಿ ಮತ್ತು ಕೈಲಾಸ ಬಾಬು ಮಾಗಿ ಅವರುಗಳ ನೇತೃತ್ವದಲ್ಲಿ ಅಕ್ಕಿಯನ್ನು ಶ್ರೀಕ್ಷೇತ್ರ ಧರ್ಮಸ್ಥಳಕ್ಕೆ ಸಮರ್ಪಿಸಲು ಕಳುಹಿಸಲಾಯಿತು.

ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆ ಸದಸ್ಯರಾದ ಶಿವನಗೌಡ ಟಿ. ಪಾಟೀಲ್, ಟಿಂಕರ್ ಮಂಜಣ್ಣ, ಬಿ.ಪಿ. ಜಗದೀಶ್, ಬಿಪಿಎಂ. ಮಂಜುನಾಥ್, ವಿನಾಯಕ ಬ್ಯಾಡಗಿ, ಜಯರಾಜ್ ಮೇಟಿ, ಪ್ರಕಾಶ್ ಮೇಟಿ, ಎಂ.ವೈ. ಆನಂದ್, ಸಂಗಮೇಶ ಗದಗ, ಅಶೋಕ ಇಂಜಿನಿಯರ್, ಆರ್.ಎಂ. ಪಂಚಾಕ್ಷರಿ, ಪಿ.ಎಸ್. ಪರಶುರಾಮ್. ಮಾಳಗಿ ಸಿದ್ದೇಶ್, ಸತೀಶ್ ಹುಬ್ಬಳ್ಳಿ, ಸತೀಶ್ ಹುರ್ಣೇಕರ್, ಶರಣಗೌಡ ಬಿರಾದಾರ್, ಟಿ.ಎಸ್.ಎಂ. ಮಲ್ಲಿಕಾರ್ಜುನ, ನಿಖಿಲ್ ಮಾಗಿ, ಹರ್ಷ ಮಾಗಿ ಮತ್ತಿತರರು ಉಪಸ್ಥಿತರಿದ್ದರು.

## ಸಿಇಟಿ : 1.71 ಲಕ್ಷ ವಿದ್ಯಾರ್ಥಿಗಳಿಗೆ ರ್‍ಯಾಂಕಿಂಗ್

**(1ನೇ ಪುಟದಿಂದ)** ಗಳಲ್ಲಿ ಮೊದಲ ಹತ್ತು ರ್‍ಯಾಂಕ್‌ಗಳ ಸಿಂಹಪಾಲು ಬೆಂಗಳೂರಿನ ವಿದ್ಯಾರ್ಥಿಗಳು ಪಡೆದರೆ, ನಂತರದ ಸ್ಥಾನ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಪಾಲಾಗಿವೆ.

ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಉನ್ನತ ಶಿಕ್ಷಣ ಸಚಿವ ಡಾ. ಸಿ.ಎನ್. ಅಶ್ವತ್ಥನಾರಾಯಣ್ ಸೆಪ್ಟೆಂಬರ್ 1 ರಿಂದ ಪ್ರವೇಶ ಪ್ರಕ್ರಿಯೆಗೆ ಸಂಬಂಧಿಸಿದಂತೆ ದಾಖಲೆಗಳ ಪರಿಶೀಲನೆ ನಡೆಯಲಿದೆ ಎಂದರು.

ಈ ಬಾರಿ 2,10,829 ಅಭ್ಯರ್ಥಿಗಳು ಪರೀಕ್ಷೆ ಹಾಜರಾಗಿದ್ದು, ಅದರಲ್ಲಿ ಇಂಜಿನಿಯರಿಂಗ್ ವಿಭಾಗಕ್ಕೆ 1,71,656 ವಿದ್ಯಾರ್ಥಿಗಳು ರ್‍ಯಾಂಕ್ ಪಡೆದಿದ್ದಾರೆ.

ಕೃಷಿ ವಿಭಾಗದಲ್ಲಿ 1,39,968 ವಿದ್ಯಾರ್ಥಿಗಳು, ಪಶುಸಂಗೋಪನೆ 1,42,820, ಯೋಗ ಮತ್ತು ನ್ಯಾಚುರೋಥೆರಪಿ 1,42,750, ಬಿ-ಫಾರ್ಮಾ 1,74,568 ಅಭ್ಯರ್ಥಿಗಳು ಅರ್ಹತೆ ಪಡೆದಿದ್ದಾರೆ ಎಂದರು.

ರ್‍ಯಾಂಕ್ ತಡೆಹಿಡಿಯಲ್ಪಟ್ಟಿರುವ ಅಭ್ಯರ್ಥಿಗಳು ತಮ್ಮ ಅರ್ಹತಾ ಪರೀಕ್ಷೆಯ ಅಂಕಪಟ್ಟಿಯನ್ನು ಸಿಇಟಿ ಕಚೇರಿಗೆ ಖುದ್ದಾಗಿ ಸಲ್ಲಿಸಿ, ರ್‍ಯಾಂಕ್ ಪಡೆದುಕೊಳ್ಳಬಹುದಾಗಿದೆ.

ರ್‍ಯಾಂಕ್ ಪಡೆದ ಮಾತ್ರಕ್ಕೆ ಸೀಟು ಹಂಚಿಕೆ ಸಾಧ್ಯವಿಲ್ಲ. ದಾಖಲಾತಿ ಪರಿಶೀಲನೆಯ ನಂತರ ಅರ್ಹತೆಯನ್ನು ಪರಿಗಣಿಸಲಾಗುವುದು.

ನೀಟ್ ಪರೀಕ್ಷೆಯ ಫಲಿತಾಂಶ ಬಂದ ನಂತರ ಅದರ ಅಂಕಗಳ ಆಧಾರದ ಮೇಲೆ ವೈದ್ಯಕೀಯ ಮತ್ತು ದಂತ ವೈದ್ಯಕೀಯ ಮತ್ತು ಭಾರತೀಯ ವೈದ್ಯ ಪದ್ಧತಿ ಹಾಗೂ ಹೋಮಿಯೋಪತಿ ಕೋರ್ಸ್‌ಗಳ ಪ್ರವೇಶಕ್ಕೆ ಪರಿಗಣಿಸಲಾಗುವುದು ಎಂದರು.

ಯಾವುದಾದರೂ ಅರ್ಹ ಅಭ್ಯರ್ಥಿಗೆ ರ್‍ಯಾಂಕ್ ನೀಡದೇ ಇದ್ದ ಪಕ್ಷದಲ್ಲಿ ಅಭ್ಯರ್ಥಿಯು ತನ್ನ ಎರಡನೇ ವರ್ಷದ ಪಿಯುಸಿ ಮಾರ್ಕ್ ಕಾರ್ಡ್, ಫೋಟೋ ಪ್ರತಿಯನ್ನು ಪ್ರಾಧಿಕಾರದ ಇಮೇಲ್ ವಿಳಾಸಕ್ಕೆ ಕಳುಹಿಸಿ, ರಾಂಕ್ ಪಡೆಯಬಹುದಾಗಿದೆ ಎಂದರು.

ಯಲಹಂಕದ ನ್ಯಾಷನಲ್ ಪಬ್ಲಿಕ್ ಸ್ಕೂಲ್ ವಿದ್ಯಾರ್ಥಿನಿಯಾದ ಅಪೂರ್ವ (ಶೇ.97) ಮೊದಲ ಸ್ಥಾನ ಪಡೆದಿದ್ದಾರೆ. ಮಾರತಹಳ್ಳಿಯ ಶ್ರೀಚೈತನ್ಯ ಟೆಕ್ನೋ ಸ್ಕೂಲ್‌ನ ಸಿದ್ಧಾರ್ಥ್ ಸಿಂಗ್ (ಶೇ.97) ದ್ವಿತೀಯರಾಗಿದ್ದಾರೆ.

# ಸೈನ್ಯ ಗೆದ್ದಿದ್ದನ್ನು ನೆಹರು ಸೋಲಿಸಿದರು




### ಕಾರ್ಗಿಲ್ ವಿಜಯೋತ್ಸವದಲ್ಲಿ ಚಕ್ರವರ್ತಿ ಸೂಲಿಬೆಲೆ

ದಾವಣಗೆರೆ, ಜು. 30 – ದೇಶಕ್ಕೆ ಸ್ವಾತಂತ್ರ್ಯ ದೊರೆತ ಸಂದರ್ಭದಲ್ಲಿ ನಡೆದ ಮೊದಲ ಕಾಶ್ಮೀರ ಯುದ್ಧದಲ್ಲಿ ಸೈನಿಕರು ತಮ್ಮ ಶೌರ್ಯದಿಂದ ಗೆದ್ದಿದ್ದನ್ನು, ಆಗಿನ ಪ್ರಧಾನ ಮಂತ್ರಿಯಾಗಿದ್ದ ಜವಾಹರಲಾಲ್ ನೆಹರು ಅವರು ರಾಜಕೀಯದಲ್ಲಿ ಕಳೆದಿದ್ದರು ಎಂದು ಯುವ ಬ್ರಿಗೇಡ್ ಮುಖಂಡ ಚಕ್ರವರ್ತಿ ಸೂಲಿಬೆಲೆ ವಿಷಾದಿಸಿದರು.

ಪ್ರೇರಣ ಯುವ ಸಂಸ್ಥೆಯ ವತಿಯಿಂದ ನಗರದ ಗುಂಡಿ ಮಹಾದೇವಪ್ಪ ಕಲ್ಯಾಣ ಮಂಟಪದಲ್ಲಿ ಆಯೋಜಿಸಲಾಗಿದ್ದ ಕಾರ್ಗಿಲ್ ವಿಜಯೋತ್ಸವ ಕಾರ್ಯಕ್ರಮದಲ್ಲಿ ಅವರು ಉಪನ್ಯಾಸ ನೀಡಿದರು.

1999ರಲ್ಲಿ ನಡೆದ ಕಾರ್ಗಿಲ್ ಯುದ್ಧ ಪಾಕಿಸ್ತಾನದ ಜೊತೆಗಿನ ಮೊದಲ ಯುದ್ಧವಲ್ಲ. ಬಹುಶಃ ಕೊನೆಯದೂ ಆಗಿರುವುದಿಲ್ಲ. ದೇಶಕ್ಕೆ ಸ್ವಾತಂತ್ರ್ಯ ಸಿಗುವ ಸಂದರ್ಭದಲ್ಲೇ ಮೊದಲ ಯುದ್ಧ ನಡೆದಿತ್ತು ಎಂದರು.

ಪಾಕಿಸ್ತಾನದ ಸೈನಿಕರು ಕಾಶ್ಮೀರದಲ್ಲಿ ನುಗ್ಗಿದ್ದರು. ಭಾರತೀಯ ಸೈನಿಕರು ಅವರನ್ನು ಹಿಮ್ಮೆಟ್ಟಿಸಿದ್ದಲ್ಲದೇ, ಲಾಹೋರ್‌ವರೆಗೂ ಸಾಗಿದ್ದರು. ಆದರೆ, ನೆಹರು ಆ ಸಂದರ್ಭದಲ್ಲಿ ವಿಶ್ವಸಂಸ್ಥೆಯ ಮೊರೆ ಹೋದರು. ಭಾರತೀಯ ಸೈನ್ಯ ಹಿಂದೆ ಸರಿಯುವಂತೆ ವಿಶ್ವಸಂಸ್ಥೆ ತಿಳಿಸಿತು. ಸೈನಿಕರು ಗೆದ್ದಿದ್ದನ್ನು ನೆಹರು ಸೋಲಿಸಿದರು ಎಂದು ಸೂಲಿಬೆಲೆ ಹೇಳಿದರು.

ಚೀನಾ ವಿಷಯದಲ್ಲೂ ನೆಹರು ಕಾರಣದಿಂದ ಭಾರತಕ್ಕೆ ಹಿನ್ನಡೆ ಆಯಿತು. ಭಾರತ ಮತ್ತು ಚೀನಾ ನಡುವೆ ಟಿಬೆಟ್ ಇತ್ತು. ಟಿಬೆಟ್ ಮೇಲೆ ಚೀನಾ ಆಕ್ರಮಣ ಮಾಡಿದಾಗ, ಟಿಬೆಟ್‌ಗೆ ನೆಹರು ನೆರವು ನೀಡಲಿಲ್ಲ. ನಂತರ ಚೀನಾ ಭಾರತದ ಗಡಿಯವರೆಗೂ ತನ್ನ ಬಾಹು ಚಾಚಿತು.

ಇದಾದ ನಂತರ ಭಾರತದ ಗಡಿಯ ಒಳಗೇ ಚೀನಾ ರಸ್ತೆಗಳನ್ನು ನಿರ್ಮಿಸಿತು. ಆಗಲೂ ನೆಹರು ನಿರ್ಲಕ್ಷ್ಯ ತೋರಿದರು. ಭಾರತದ ಮೇಲೆ ಆಕ್ರಮಣ ನಡೆಸುವುದಿಲ್ಲ ಎಂದು ಚೀನಾದ ನಾಯಕರು ಹೇಳಿದ ಸುಳ್ಳುಗಳನ್ನು ನಂಬಿದ್ದರು ಎಂದು ಸೂಲಿಬೆಲೆ ಹೇಳಿದರು.

ಕಾರ್ಗಿಲ್ ವಿಜಯೋತ್ಸವ ಈಗ ಜನರ ಆಚರಣೆಯಾಗಿದೆ. ಕಾರ್ಗಿಲ್ ವಿಜಯೋತ್ಸವ ಆಚರಿಸಿದರೆ ಯಾವುದೋ ಪಕ್ಷಕ್ಕೆ (ಬಿಜೆಪಿಗೆ) ಲಾಭವಾಗುತ್ತದೆ ಎಂದು ಕೇಂದ್ರದಲ್ಲಿ ಆಡಳಿತ ನಡೆಸಿದ ಪಕ್ಷವೊಂದು (ಕಾಂಗ್ರೆಸ್) ಭಾವಿಸಿತ್ತು. ಹೀಗಾಗಿ ಆ ಸರ್ಕಾರ ಕಾರ್ಗಿಲ್ ವಿಜಯೋತ್ಸವ ನಿಲ್ಲಿಸಿತು ಎಂದವರು ಆರೋಪಿಸಿದರು.

ಆದರೆ, ಇದರಿಂದ ಒಳ್ಳೆಯದೇ ಆಯಿತು. ಕಾರ್ಗಿಲ್ ವಿಜಯೋತ್ಸವ ಸರ್ಕಾರದ ಬದಲು ಜನರು ಆಚರಿಸುವಂತಾಯಿತು. ಸರ್ಕಾರ ಆಚರಣೆ ಬಿಟ್ಟಾಗಲೇ, ಅದಕ್ಕೆ ನಿಜವಾದ ಬೆಲೆ ಬರುತ್ತದೆ ಎಂದವರು ಮಾರ್ಮಿಕವಾಗಿ ಹೇಳಿದರು.

ಈ ಸಂದರ್ಭದಲ್ಲಿ ಮಾತನಾಡಿದ ಮಾಜಿ ಸೈನಿಕರ ಜಿಲ್ಲಾ ಸಂಘದ ಅಧ್ಯಕ್ಷ ಸತ್ಯಪ್ರಕಾಶ್, ಕಾರ್ಗಿಲ್ ಯುದ್ಧದಲ್ಲಿ ದೇಶದ 527 ಯೋಧರು ಹುತಾತ್ಮರಾದರು. ಈಗಲೂ ಗಡಿಯಲ್ಲಿ ಸೈನಿಕರು ರಕ್ಷಣೆ ಮಾಡುತ್ತಿರುವ ಕಾರಣದಿಂದ ದೇಶ ಸುರಕ್ಷಿತವಾಗಿದೆ ಎಂದರು.

ಅರೆ ಸೇನಾ ಪಡೆ ಯೋಗಕ್ಷೇಮ ಸಂಘದ ಅಧ್ಯಕ್ಷ ಮಂಜು ನಾಯ್ಕ ಮಾತನಾಡಿ, ಪ್ರತಿದಿನ ದೇವರಿಗೆ ಪ್ರಾರ್ಥಿಸುವ ವೇಳೆ ಗಡಿಯಲ್ಲಿರುವ ಯೋಧರ ಸುರಕ್ಷತೆಗಾಗಿಯೂ ಕೇಳಿಕೊಳ್ಳಬೇಕು ಎಂದು ಕರೆ ನೀಡಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಮಾಜಿ ಮೇಯರ್ ಹಾಗೂ ಪ್ರೇರಣ ಯುವ ಸಂಸ್ಥೆಯ ಅಧ್ಯಕ್ಷ ಎಸ್.ಟಿ. ವೀರೇಶ್, 1999ರಲ್ಲಿ ಕಾರ್ಗಿಲ್ ಸಮರದ ಸಂದರ್ಭದಲ್ಲೇ ಪ್ರೇರಣ ಸಂಸ್ಥೆ ಸ್ಥಾಪನೆಯಾಗಿತ್ತು. ಆಗಿನಿಂದಲೂ ಕಾರ್ಗಿಲ್ ವಿಜಯೋತ್ಸವದ ಆಚರಣೆಯನ್ನು ಪ್ರತಿ ವರ್ಷ ಆಚರಿಸುತ್ತಾ ಬಂದಿದ್ದೇವೆ ಎಂದು ಹೇಳಿದರು.

ಪ್ರೇರಣ ಸಂಸ್ಥೆಯ ಕಾರ್ಯದರ್ಶಿ ಮಹೇಶ್ ಶೆಟ್ಟಿ ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

## ಸೆಪ್ಟೆಂಬರ್‌ಗೆ ಟಿವಿ ಸ್ಟೇಷನ್ ಕೆರೆ ಕಾಮಗಾರಿ ಪೂರ್ಣ

**(1ನೇ ಪುಟದಿಂದ)** ಮುಗಿದಿದೆ. ಕಾಮಗಾರಿಗಳು ಆರಂಭವಾಗುವುದು ಸ್ವಲ್ಪ ತಡವಾಗಿದೆ. ಹಾಗಾಗಿ ಕಾಮಗಾರಿಗಳು ಬೇಗನೆ ಮುಗಿದು ಈ ಕೆರೆಯು ನಗರಕ್ಕೆ ಕಳಶ ಪ್ರಾಯವಾಗಬೇಕೆಂದರು.

ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರು ಹಾಗೂ ಅಧಿಕಾರಿಗಳು ಸೆಪ್ಟಂಬರ್ ಅಂತ್ಯದೊಳಗೆ ಕಾಮಗಾರಿ ಪೂರ್ಣಗೊಳಿಸುವುದಾಗಿ ತಿಳಿಸಿದ್ದಾರೆ. ಸೆಪ್ಟಂಬರ್ ಒಳಗೆ ಕಾಮಗಾರಿಗಳು ಮುಗಿದರೆ ನವೆಂಬರ್‌ನಲ್ಲಿ ನಾಲೆಯಿಂದ ಕೆರೆಗೆ ನೀರು ತುಂಬಿಸಬಹುದು. ಆನಂತರ ಕೆರೆಯ ಉಳಿದ ಸೌಂದರ್ಯಕರಣ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಬಹುದಾಗಿದೆ ಎಂದರು.

ಕೆರೆಯ ಹೊರಾಂಗಣವನ್ನು ಸೌಂದರ್ಯಕರಣಗೊಳಿಸಲು ಆಕರ್ಷಕ ಹೂ ಗಿಡ ಮರಗಳನ್ನು ಬೆಳೆಸುವುದು, ಆಕರ್ಷಕ ಫುಟ್‌ಪಾತ್, ವಾಕಿಂಗ್ ಪಾಥ್, ಎಲೆಕ್ಟ್ರಾನಿಕ್ ಲೈಟ್ಸ್, ಬೆಂಚ್‌ಕಲ್ಲು ಹಾಗೂ ವಾಯು ವಿಹಾರಕ್ಕೆ ಪೂರಕವಾಗುವಂತಹ ಇನ್ನಿತರೆ ಮೂಲಸೌಕರ್ಯ ಕಲ್ಪಿಸಲಾಗುವುದು. ಜಿಲ್ಲೆಯಲ್ಲಿ ಟಿವಿ ಸ್ಟೇಷನ್ ಕೆರೆ ಕೂಡ ಒಳ್ಳೆಯ ಪ್ರವಾಸಿ ಸ್ಥಳ ವಾಗಲಿದೆ ಇದಕ್ಕೆ ಜಿಲ್ಲೆಯ ಎಲ್ಲಾ ಶಾಸಕರು, ಜಿಲ್ಲಾಧಿಕಾರಿಗಳು, ಮಹಾನಗರ ಪಾಲಿಕೆಯವರು, ದೂಡಾ ಅಧಿಕಾರಿಗಳು ಹೆಚ್ಚಿನ ಒತ್ತು ನೀಡಬೇಕು ಎಂದರು. ಜಿಲ್ಲಾಧಿಕಾರಿ ಶಿವಾನಂದ ಕಪಾಸಿ, ಮೇಯರ್ ಜಯಮ್ಮ ಗೋಪಿನಾಯ್ಕ್, ದೂಡಾ ಅಧ್ಯಕ್ಷ ಕೆ.ಎಂ ಸುರೇಶ್, ಸಮಾಜ ಕಲ್ಯಾಣ ಇಲಾಖೆಯ ಕೇಂದ್ರ ಪರಿಹಾರ ಸಮಿತಿಯ ಅಧ್ಯಕ್ಷ ಬಸವರಾಜ ನಾಯ್ಕ್, ಮಹಾನಗರ ಪಾಲಿಕೆ ಆಯುಕ್ತ ವಿಶ್ವನಾಥ್ ಮುದ್ದಜ್ಜಿ, ದೂಡಾ ಆಯುಕ್ತ ಕುಮಾರಸ್ವಾಮಿ ಸೇರಿದಂತೆ ಇತರರು ಹಾಜರಿದ್ದರು.

# ಪಾಲಿಕೆ ಸದಸ್ಯ ರಾಕೇಶ್‌ರಿಂದ ಭ್ರಷ್ಟಾಚಾರ : ಕಾಂಗ್ರೆಸ್ ಆರೋಪ



ದಾವಣಗೆರೆ, ಜು. 30- ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಯಶವಂತ ರಾವ್ ಅವರ ಮಗ ರಾಕೇಶ್ ಮಹಾನಗರ ಪಾಲಿಕೆಯ ಸದಸ್ಯರಾಗಿ ಭ್ರಷ್ಟಾಚಾರವನ್ನು ಮುಂದುವರೆಸಿದ್ದಾರೆ ಎಂದು ಜಿಲ್ಲಾ ಕಾಂಗ್ರೆಸ್ ಮಹಿಳಾ ಅಧ್ಯಕ್ಷರಾದ ಶ್ರೀಮತಿ ಅನಿತಾಬಾಯಿ ಮಾಲತೇಶ್ ಅವರು ಗಂಭೀರ ಆರೋಪ ಮಾಡಿದ್ದಾರೆ.

ನಗರದ 10ನೇ ವಾರ್ಡ್‌ನ ಕಾಳಿಕಾದೇವಿ ದೇವಸ್ಥಾನ ಪಕ್ಕದ ರಸ್ತೆಯ ಅಭಿವೃದ್ಧಿ ನೆಪದಲ್ಲಿ ಸುಸ್ಥಿತಿಯಲ್ಲಿದ್ದ ರಸ್ತೆಯನ್ನು ಪುನರ್ನಿರ್ಮಿಸಲು ಆದೇಶ ಹೊರಡಿಸಿರುವುದನ್ನು ಖಂಡಿಸಿ ಇಂದು ನಡೆಸಿದ ಪ್ರತಿಭಟನೆಯ ನೇತೃತ್ವ ವಹಿಸಿ ಅವರು ಮಾತನಾಡಿದರು.

ಯಶವಂತರಾವ್ ನಗರಸಭೆ ಮತ್ತು ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ನಡೆಸಿದ ಭ್ರಷ್ಟಾಚಾರದ ವಿರುದ್ಧ ಲೋಕಾಯುಕ್ತ ತನಿಖೆ ನಡೆಯುತ್ತಿರುವುದನ್ನು ಜನತೆ ಮರೆತಿಲ್ಲ. ಇದೀಗ ಮಗನೂ ಸಹ ಆ ಭ್ರಷ್ಟಾಚಾರವನ್ನು ಮುಂದುವರೆಸುತ್ತಿದ್ದು, ಜನತೆ ತಕ್ಕಪಾಠ ಕಲಿಸಲಿದ್ದಾರೆ ಎಂದು ಎಚ್ಚರಿಸಿದರು.

ಕಳೆದ 10 ವರ್ಷಗಳ ಹಿಂದೆ ಅಭಿವೃದ್ಧಿಯಾಗಿದ್ದ ಸಿ.ಸಿ.ರಸ್ತೆಯನ್ನು ಇದೀಗ ಹಣ ಹೊಡೆಯುವ ದೃಷ್ಟಿಯಿಂದ ಮತ್ತೆ ಕಿತ್ತು ರಸ್ತೆ ನಿರ್ಮಾಣ ಮಾಡಲಾಗುತ್ತಿದೆ ಎಂದು ದೂರಿದ ಅವರು, ಅನೇಕ ವಾರ್ಡ್‌ಗಳಲ್ಲಿ ಅಭಿವೃದ್ಧಿ ಆಗದಿರುವ ರಸ್ತೆಗಳಿದ್ದು, ಅಂತಹ ರಸ್ತೆಗಳನ್ನು ಅಭಿವೃದ್ಧಿ ಪಡಿಸಲಿ ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ, ಮಹಾನಗರ ಪಾಲಿಕೆ ಸ್ಥಾಯಿ ಸಮಿತಿ ಅಧ್ಯಕ್ಷ ಉದಯ್ ಕುಮಾರ್, ವಿಪಕ್ಷ ನಾಯಕ ಜಿ.ಎಸ್.ಮಂಜುನಾಥ್, ಸದಸ್ಯರುಗಳಾದ ಎ.ನಾಗರಾಜ್, ಜಾಕಿರ್ ಅಲಿ, ಹರೀಶ್ ಕೆ.ಎಲ್.ಬಸಾಪುರ, ಸ್ಥಳೀಯ ಮುಖಂಡ ಹನುಮಂತರಾವ್, ಮಹಿಳಾ ಮುಖಂಡರುಗಳಾದ ಗೀತಾ ಚಂದ್ರಶೇಖರ್, ಶುಭಮಂಗಳ, ಕಮಲಮ್ಮ, ಮಂಜುಳಾ ಮತ್ತಿತರರಿದ್ದರು.

## ಕಾರ್ಗಿಲ್: ಪಾಯಿಂಟ್ 5140ಗೆ ಗನ್ ಹಿಲ್ ಹೆಸರು

ಶ್ರೀನಗರ, ಜು. 30 – ಕಾರ್ಗಿಲ್ ಯುದ್ಧದ ಸಂದರ್ಭದಲ್ಲಿ ಆಪರೇಷನ್ ವಿಜಯ್ ವೇಳೆ ದ್ರಾಸ್‌ನಲ್ಲಿರುವ ಪಾಯಿಂಟ್ 5140 ಬೆಟ್ಟದ ಮೇಲೆ ಭಾರತೀಯ ಪಡೆಗಳ ತ್ಯಾಗವನ್ನು ಗೌರವಿಸಲು ಆ ಬೆಟ್ಟಕ್ಕೆ 'ಗನ್ ಹಿಲ್' ಎಂಬ ಹೆಸರಿಡಲಾಗಿದೆ ಎಂದು ರಕ್ಷಣಾ ವಕ್ತಾರರು ಹೇಳಿದ್ದಾರೆ. 1999ರ ಕಾರ್ಗಿಲ್ ಯುದ್ಧ ವನ್ನು ತ್ವರಿತ ವಾಗಿ ಪೂರ್ಣಗೊಳಿ ಸುವಲ್ಲಿ ಈ ಬೆಟ್ಟದ ಮೇಲೆ ನಡೆಸ ಲಾದ ಸಂಘರ್ಷ ಮಹತ್ವ ಪಡೆದಿತ್ತು.

**ಲಕ್ಷ್ಮಿ ಬಾಲಾಜಿ ಸಿಲ್ವರ್ ಫೋಟೋ ಫ್ರೇಮ್**

ಸರ್ವಾಲಂಕೃತ ದೇವರ ಫೋಟೋಗಳು ವರಮಹಾಲಕ್ಷ್ಮೀ ಪೂಜೆಗೆ ಗೌರಿ, ಗಣೇಶ, ಲಕ್ಷ್ಮಿ ಪೀಠ, ಲಕ್ಷ್ಮಿ ಮುಖ, ಸೀರೆ, ಅಲಂಕೃತ ಫೋಟೋಗಳು ದೊರೆಯುತ್ತವೆ.

ಶಿವ-ಪಾರ್ವತಿ, ಬಾಲಾಜಿ ಪದ್ಮಾವತಿ ಲೈಟೆನಿಂಗ್ ಫೋಟೋಗಳು, ಮ್ಯಾರೇಜ್ ಗಿಫ್ಟ್, ಪ್ಯೂರ್ ಸಿಲ್ವರ್ ಫೋಟೋ ರೂ. 150, 200, 360 ರೂ.ಗಳಲ್ಲಿ ದೊರೆಯುತ್ತವೆ. ಮದುವೆ ಹಾಗೂ ಇತರೆ ಶುಭ ಸಮಾರಂಭಗಳಿಗೆ ಗೃಹ ಪ್ರವೇಶ, ಸತ್ಯನಾರಾಯಣ ಪೂಜೆಗೆ ಸಿಲ್ವರ್ ಫೋಟೋ ದೊರೆಯುತ್ತವೆ. ದೇವರ ಹಾರ, ದೇವರ ಕಿರೀಟ, ಡಾಬೂ, ವಂಕಿ ದೊರೆಯುತ್ತವೆ.

#34 ಮುರುಘರಾಜೇಂದ್ರ ಕಾಂಪ್ಲೆಕ್ಸ್ ಶಿವಪ್ಪಯ್ಯ ವೃತ್ತದ ಹತ್ತಿರ, ದಾವಣಗೆರೆ-2.

**99451 59582**

## ಪಾಲಿಕೆ ಸದಸ್ಯರ ಜನಸಂಪರ್ಕ ಕಚೇರಿಯಲ್ಲಿ ಕಾರು-ಮಾರಕಾಸ್ತ್ರಗಳ ಬಚ್ಚಿಟ್ಟ ರೌಡಿಶೀಟರ್ : ಜಪ್ತು

ದಾವಣಗೆರೆ, ಜು.30- ಇಲ್ಲಿನ ನಗರ ಪಾಲಿಕೆ ಸದಸ್ಯೆಯೋರ್ವರ ಜನಸಂಪರ್ಕ ಕಚೇರಿಯಲ್ಲಿ ರೌಡಿಶೀಟರ್ ಓರ್ವ ಬಚ್ಚಿಟ್ಟಿದ್ದ 10 ಲಕ್ಷ ರೂ. ಮೌಲ್ಯದ ಕಾರು ಮತ್ತು ಮಾರಕಾಸ್ತ್ರಗಳನ್ನು ಪೊಲೀಸರು ಜಪ್ತು ಮಾಡಿದ್ದಾರೆ.

ಕೆಟಿಜೆ ನಗರ ಪೊಲೀಸ್ ಠಾಣಾ ವ್ಯಾಪ್ತಿಯ ಲೆನಿನ್ ನಗರದ ನಗರ ಪಾಲಿಕೆಯ 36ನೇ ವಾರ್ಡ್ ಸದಸ್ಯೆ ನಾಗರತ್ನಮ್ಮ ಅವರ ಜನಸಂಪರ್ಕ ಕಛೇರಿಯ ಒಳಗಡೆ ರೌಡಿಶೀಟರ್ ಸಂತೋಷಕುಮಾರ್ ಅಲಿಯಾಸ್ ಕಣುಮ ಮತ್ತು ಈತನ ಸಹಚರರು ಸೇರಿಕೊಂಡು ನಂಬರ್ ಪ್ಲೇಟ್ ಇಲ್ಲದೇ ಇರುವ ಕಾರನ್ನು ಬಚ್ಚಿಟ್ಟಿದ್ದರು.

ಜು.29, 2022ರಂದು ನಗರ ಉಪವಿಭಾಗದ ಪೊಲೀಸ್ ಉಪಾಧೀಕ್ಷಕ ನರಸಿಂಹ ವಿ. ತಾಮ್ರಧ್ವಜ, ಡಿಸಿಆರ್‌ಬಿ ಪೊಲೀಸ್ ಉಪಾಧೀಕ್ಷಕ ಬಿ.ಎಸ್. ಬಸವರಾಜ್ ನೇತೃತ್ವದಲ್ಲಿ ಕೆಟಿಜೆ ನಗರ ಪೊಲೀಸ್ ಠಾಣೆಯ ಪಿಎಸ್‌ಐಗಳಾದ ಪ್ರಭು ಡಿ. ಕೆಳಗಿನಮನಿ, ಮಂಜುಳಾ, ಎಎಸ್‌ಐ ಜಿ. ಈರಣ್ಣ ಮತ್ತು ಸಿಬ್ಬಂದಿಗಳಾದ ಜಿಲ್ಲಾ ಡಿಸಿಆರ್‌ಬಿ ವಿಭಾಗದ ಮಾರುತಿ, ಆಂಜನೇಯ, ಅಶೋಕ, ಮಲ್ಲಿಕಾರ್ಜುನ, ಬಾಲರಾಜ್ ಮತ್ತು ಕೆಟಿಜೆ ನಗರ ಠಾಣೆಯ ಪ್ರಕಾಶ್, ಮಂಜಪ್ಪ, ಷಣ್ಮುಖ, ಮಂಜನಗೌಡ, ಬಿ.ಆರ್. ರವಿ, ಪ್ರಸನ್ನ ಒಳಗೊಂಡ ತಂಡ ಸ್ಥಳದ ಮೇಲೆ ದಾಳಿ ನಡೆಸಿದ ಪೊಲೀಸರು, ಕಾರನ್ನು ಪರಿಶೀಲಿಸಿದಾಗ ಕಾರಿನೊಳಗಡೆ ನಾಲ್ಕು ಕಬ್ಬಿಣದ ಮಚ್ಚುಗಳು, 50 ಗ್ರಾಂನಷ್ಟು ಖಾರದ ಪುಡಿ ಇಟ್ಟುಕೊಂಡಿರುವುದು ಪತ್ತೆಯಾಗಿದೆ.

ಆರೋಪಿಗಳಾದ ಸಂತೋಷ ಕುಮಾರ್ @ ಕಣುಮ, ಪರಮೇಶ್ @ ಪರಮಿ, ಶಿವಪ್ಪ, ಪರಶುರಾಮ್ @ ಪರ್ಶಿ, ದಾದಾಪೀರ್ @ ದಾದು, ಮಂಜುನಾಥ @ ತಮ್ಮಡು, ಶ್ರೀನಿವಾಸ @ ಬೂಚ, ತ್ರಿಲೋಕ್ @ ತಿಲಕ್ ನಾಯ್ಕ, ತ್ರಿಗುಣ @ ತ್ರಿಗುಣನಾಯ್ಕ, ದಸ್ತು ಇವರುಗಳ ವಿರುದ್ಧ ಕೆಟಿಜೆ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ನನ್ನಮ್ಮ ನಂಬರ್ 1 ಗ್ರಾಂಡ್ ಫಿನಾಲೆ : ಸೌಮ್ಯ ಹರೀಶ್ ವಿನ್ನರ್



ದಾವಣಗೆರೆ, ಜು. 30- ನಗರದ ಗುಂಡಿ ಮಹಾದೇವಪ್ಪ ಕಲ್ಯಾಣ ಮಂಟಪದಲ್ಲಿ ಈಚೆಗೆ ಕಲಾಕಲ್ಪ ಅಕಾಡೆಮಿ ಮತ್ತು ವಿ ಯೂನಿಯನ್ ಈವೆಂಟ್ಸ್‌ನವರು ಆಯೋಜಿಸಿದ್ದ ನನ್ನಮ್ಮ ನಂಬರ್ 1 ಗ್ರಾಂಡ್ ಫಿನಾಲೆ ಕಾರ್ಯಕ್ರಮದಲ್ಲಿ ಭಾರತಿ ಆರ್ಕೆಸ್ಟ್ರಾ ಮಾಲೀಕರಾದ ಶ್ರೀಮತಿ ಸೌಮ್ಯ ಹರೀಶ್ ವಿನ್ನರ್ ಆಗಿ ಆಯ್ಕೆಯಾಗಿದ್ದಾರೆ.

## ಮಧ್ಯರಾತ್ರಿ ಮಳೆ; ಶಾಸಕರ ಭೇಟಿ



ರಾಣೇಬೆನ್ನೂರು, ಜು. 30- ನಿನ್ನೆ ಮಧ್ಯರಾತ್ರಿ ಸುರಿದ ಭಾರೀ ಮಳೆಗೆ ನಗರದ ವಿವಿಧ ಬಡಾವಣೆಗಳಲ್ಲಿನ ಮನೆ, ಅಂಗಡಿಗಳಿಗೆ ನೀರು ನುಗ್ಗಿ ಜನರಿಗೆ ಆದ ತೊಂದರೆಯನ್ನು ಶಾಸಕ ಅರುಣಕುಮಾರ ಪೂಜಾರ ವೀಕ್ಷಿಸಿದರು.

ನಗರಸಭೆ ಸೇರಿದಂತೆ ವಿವಿಧ ಅಧಿಕಾರಿಗಳ ಜೊತೆ ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಿದರು. ಶಾಸಕರ ಜೊತೆ ಇಂದಿನ ಹಾಗೂ ಹಿಂದಿನ ಪ್ರಾಧಿಕಾರದ ಅಧ್ಯಕ್ಷರಾದ ಶಿವಕುಮಾರ,ಚೋಳಪ್ಪ ಮತ್ತು ನಗರಸಭೆ ಸದಸ್ಯರು ಇದ್ದರು.

**ಪಾಸ್‌ಪೋರ್ಟ್‌ಗಳು ಕಳೆದಿವೆ**

ಕೆ.ಸೂರ್ಯನಾರಾಯಣ ಬಿನ್ ಕೆ.ವೀರಸ್ವಾಮಿ, ವಾಸ ಡೋ.ನಂ. 602/82-3, 2ನೇ ಮೇನ್, ಬಿವಿಗಿರಿ ಚಂದ್ರಗಿರಿ ಬಿಲ್ಡಿಂಗ್ ಎದುರು ಆಂಜನೇಯ ಬಡಾವಣೆ, ದಾವಣಗೆರೆ ಆದ ನನ್ನ ಪಾಸ್‌ಪೋರ್ಟ್ ನಂ. K 3243632 ಮತ್ತು ನನ್ನ ಧರ್ಮಪತ್ನಿ ಶ್ರೀಮತಿ ಕೆ.ಸೀತಾ ಮಹಾಲಕ್ಷ್ಮಿ ಇವರ ಪಾಸ್‌ಪೋರ್ಟ್ ನಂ. K3243916 ಇವುಗಳು ದಿನಾಂಕ 8.6.2022ರಂದು ಮಧ್ಯಾಹ್ನ ಸುಮಾರು 12.30 ಗಂಟೆ ಸಮಯದಲ್ಲಿ ನಾನು ನಗರದ ವಿದ್ಯಾನಗರದ ಕೆನರಾ ಬ್ಯಾಂಕ್ ಎದುರಿನಲ್ಲಿ ಹೋಗುವಾಗ ಕಳೆದು ಹೋಗಿರುತ್ತವೆ. ಈ ಮೇಲ್ಕಂಡ ಪಾಸ್‌ಪೋರ್ಟ್‌ಗಳು ಯಾರಿಗಾದರೂ ಸಿಕ್ಕಲ್ಲಿ ದಯವಿಟ್ಟು ಈ ಕೆಳಗಿನ ಫೋನ್ ನಂಬರ್‌ಗೆ ಸಂಪರ್ಕಿಸಿ, ತಲುಪಿಸಬೇಕಾಗಿ ಪ್ರಾರ್ಥಿಸಿ ಕೋಳ್ಳುತ್ತೇನೆ.

**ಕೆ. ಸೂರ್ಯನಾರಾಯಣ ಮೊ : 94807 12387**

**WANTED**



**Gym Sector** Tele Caller
(Female Only)
Qualification - Any Degree
Salary - 8,000+Incentive
Adress : **Richton Furnitures building, 2nd floor, 4th Main Road, SS Layout, Davangere - 577 004**
**(Friday - Sunday)** Interview Time - 11 AM to 5 PM
Contact No. : **96328 57012**

## ಸಿ.ಇ.ಟಿ : ಮಾಗನೂರು ಕಾಲೇಜಿಗೆ ಫಲಿತಾಂಶ



ದಾವಣಗೆರೆ, ಜು. 30- ಇಂಜಿನಿಯರಿಂಗ್, ವೆಟರಿನರಿ ಸೈನ್ಸ್, ನ್ಯಾಚುರೋಪತಿ, ಅಗ್ರಿಕಲ್ಚರ್ ಹಾಗೂ ಫಾರ್ಮ ಸೈನ್ಸ್ ಪದವಿ ಪ್ರವೇಶಕ್ಕೆ ನಡೆದ ಸಿ.ಇ.ಟಿ ಪರೀಕ್ಷೆಯಲ್ಲಿ ನಗರದ ಮಾಗನೂರು ಬಸಪ್ಪ ಕಾಲೇಜಿನ ವಿದ್ಯಾರ್ಥಿಗಳ ಉತ್ತಮ ರ್‍ಯಾಂಕ್ ಪಡೆದಿರುತ್ತಾರೆ.

5000 ರ್‍ಯಾಂಕ್ ಒಳಗೆ ಒಟ್ಟು 57 ವಿದ್ಯಾರ್ಥಿ ಗಳು, 4000 ರ್‍ಯಾಂಕ್ ಒಳಗೆ 41 ವಿದ್ಯಾರ್ಥಿಗಳು, 3000 ರ್‍ಯಾಂಕ್ ಒಳಗೆ 30 ವಿದ್ಯಾರ್ಥಿಗಳು, 2000 ರ್‍ಯಾಂಕ್ ಒಳಗೆ 13 ವಿದ್ಯಾರ್ಥಿಗಳು ಹಾಗೂ 1000 ರ್‍ಯಾಂಕ್ ಒಳಗೆ 4 ವಿದ್ಯಾರ್ಥಿಗಳು ಉತ್ತಮ ಫಲಿತಾಂಶ ನೀಡಿರುತ್ತಾರೆ. ಬಿ.ಎಸ್ಸಿ ಅಗ್ರಿಕಲ್ಚರ್‌ನಲ್ಲಿ ಚಂದನ ಜಿ.ಸಿ 176ನೇ ರ್‍ಯಾಂಕ್, ರಕ್ಷಿತ ಜಿ.ಡಿ 251ನೇ ರ್‍ಯಾಂಕ್, ವೆಟರಿನರಿ ಸೈನ್ಸ್‌ನಲ್ಲಿ ರಕ್ಷಿತ ಜಿ.ಡಿ 279ನೇ ರ್‍ಯಾಂಕ್, ಚಂದನ ಜಿ.ಸಿ 362ನೇ ರ್‍ಯಾಂಕ್, ಬಿ.ಎಸ್ಸಿ ಅಗ್ರಿಕಲ್ಚರ್‌ನಲ್ಲಿ ಶ್ರೇಯಸ್ ಜೆ.ಕೆ 1206ನೇ ರ್‍ಯಾಂಕ್ ಮತ್ತು ಹಾಗೂ ವೆಟರಿನರಿ ಸೈನ್ಸ್‌ನಲ್ಲಿ ಕಾವ್ಯ ಹೆಚ್.ಎಸ್. 1215ನೇ ರ್‍ಯಾಂಕ್ ಪಡೆದಿದ್ದಾರೆ.

## ವಿದ್ಯಾರ್ಥಿಗಳು ದೊಡ್ಡ ಕನಸು ಕಾಣಬೇಕು : ದೇವೇಂದ್ರಪ್ಪ



ಮಲೇಬೆನ್ನೂರು, ಜು.30- ಕಾಗಿನೆಲೆ ಕನಕ ಗುರುಪೀಠದ ಬೆಳ್ಳೂಡಿ ಶಾಖಾಮಠದ ಆಶ್ರಮದಲ್ಲಿ ನಡೆಯುತ್ತಿರುವ ಶ್ರೀ ಚಂದ್ರಗುಪ್ತ ಮೌರ್ಯ ಪಬ್ಲಿಕ್ ಶಾಲೆಯಲ್ಲಿ ಶನಿವಾರ ಶಾಲಾ ಪ್ರತಿನಿಧಿಗಳ ಪದಗ್ರಹಣ ಸಮಾರಂಭ ಜರುಗಿತು. ಮುಖ್ಯ ಅತಿಥಿಯಾಗಿದ್ದ ನಿವೃತ್ತ ಎಸ್ಪಿ ರವಿನಾರಾಯಣ ಮಾತನಾಡಿ, ಮಕ್ಕಳಲ್ಲಿ ಶ್ರದ್ಧೆ, ಗುರಿ ತುಂಬುವ ಕೆಲಸವನ್ನು ಶಿಕ್ಷಕರು ಮಾಡಿದಾಗ ಮಾತ್ರ ಅವರು ಪ್ರಗತಿ ಸಾಧಿಸಲು ಸಾಧ್ಯ ಎಂದರು.

ಶಾಲೆಯ ನಿರ್ದೇಶಕರೂ ಆದ ನಿವೃತ್ತ ಪೊಲೀಸ್ ಅಧಿಕಾರಿ ಕುಣೆಬೆಳಕೆರೆ ದೇವೇಂದ್ರಪ್ಪ ಮಾತನಾಡಿ, ವಿದ್ಯಾರ್ಥಿಗಳು ದೊಡ್ಡ ಸಾಧನೆ ಮಾಡಬೇಕಾದರೆ ದೊಡ್ಡ ಕನಸುಗಳನ್ನೇ ಕಾಣಬೇಕೆಂದು ಹುರಿದುಂಬಿಸಿದರು. ಶಾಲೆಯ ಕಾರ್ಯದರ್ಶಿ ಎಸ್.ನಿಂಗಪ್ಪ, ಪ್ರಾಚಾರ್ಯರಾದ ಶ್ರೀಮತಿ ಶೃತಿ ಇನಾಂದಾರ್, ನಿಂಚನ ಪಬ್ಲಿಕ್ ಶಾಲೆಯ ಪ್ರಾಚಾರ್ಯರಾದ ನಸ್ರೀನ್ ತಾಜ್ ಮತ್ತಿತರರು ಈ ವೇಳೆ ಹಾಜರಿದ್ದರು.

ದಾವಣಗೆರೆ ಜಿಲ್ಲಾ ಸಹಕಾರ ಸಂಘ ನಿಯಮಿತ

**ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ ಬಾಡ, ದಾವಣಗೆರೆ ತಾಲ್ಲೂಕು, ದಾವಣಗೆರೆ ಜಿಲ್ಲೆ**

Phone : **99866 79836**
ಟೆಂಡರ್ ಸಂಖ್ಯೆ : **PACS/SC4/2022-23**

**ಅಲ್ಪಾವಧಿ ಟೆಂಡರ್ ಪ್ರಕಟಣೆ**

ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ, ಬಾಡ, ಕಟ್ಟಡದ ನಿರ್ಮಾಣಕ್ಕಾಗಿ ದ್ವಿಲಕೋಟೆ ಪದ್ಧತಿಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಅರ್ಹ ಗುತ್ತಿಗೆದಾರರು ಕಾನೂನು ರೀತ್ಯ ನೋಂದಣಿಯಾದ ಎಲ್ಲಾ ದಾಖಲೆಗಳನ್ನು ತಾಂತ್ರಿಕ ಲಕೋಟೆ ಹಾಗೂ ಆರ್ಥಿಕ ಲಕೋಟೆಯಲ್ಲಿಟ್ಟು ಶೀಲ್ಡ್ ಮಾಡಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ, ಬಾಡ, ದಾವಣಗೆರೆ ತಾಲ್ಲೂಕು, ದಾವಣಗೆರೆ ಜಿಲ್ಲೆ. ಇವರಿಗೆ ದಿನಾಂಕ 16.8.2022ರ ಸಂಜೆ 4.30ರೊಳಗೆ ಸಲ್ಲಿಸುವುದು. ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ 17.8.2022ರ ಮಧ್ಯಾಹ್ನ 1 ಗಂಟೆಗೆ ತೆರೆಯಲಾಗುವುದು. ಟೆಂಡರ್‌ನ ಅಂದಾಜು ಮೊತ್ತ ರೂ.45.00 ಲಕ್ಷಗಳು. ಇಎಂಡಿ ಮೊತ್ತ ರೂ.2,25,000/-ಗಳನ್ನು ಮುಖ್ಯ ನಿರ್ವಹಣಾಧಿಕಾರಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ, ಬಾಡ ಇವರ ಹೆಸರಿನಲ್ಲಿ ಬ್ಯಾಂಕಿನಿಂದ ಡಿ.ಡಿ. ಪಡೆದು, ಟೆಂಡರ್ ದಸ್ತಾವೇಜು ಜೊತೆಗೆ ಸಲ್ಲಿಸುವುದು. ಷರತ್ತು ಹಾಗೂ ಹೆಚ್ಚಿನ ಮಾಹಿತಿಗಾಗಿ, ಮುಖ್ಯ ಕಾರ್ಯ ನಿರ್ವಹಣಾಧಿಕಾರಿ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ, ಬಾಡ ಇವರ ದೂರವಾಣಿ ಸಂಖ್ಯೆ 99866 79836 ಇವರನ್ನು ಸಂಪರ್ಕಿಸುವುದು.

ಸಹಿ/-
**ಮುಖ್ಯ ಕಾರ್ಯ ನಿರ್ವಹಣಾಧಿಕಾರಿ**
ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ, ಬಾಡ,
ದಾವಣಗೆರೆ ತಾಲ್ಲೂಕು, ದಾವಣಗೆರೆ ಜಿಲ್ಲೆ.

## ಆರಗ ಮನೆಗೆ ಮುತ್ತಿಗೆ : ಇಬ್ಬರು ಪೊಲೀಸರ ಅಮಾನತ್ತು

ಬೆಂಗಳೂರು, ಜು. 30 - ಗೃಹ ಸಚಿವ ಆರಗ ಜ್ಞಾನೇಂದ್ರ ಮನೆಗೆ ಎಬಿವಿಪಿ ಕಾರ್ಯಕರ್ತರು ಮುತ್ತಿಗೆ ಹಾಕಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಜೆ.ಸಿ.ನಗರ ಠಾಣೆ ಪಿಎಸ್ಐ ರಾಜೇಸಾಬ್ ಹಾಗೂ ಹೆಡ್ ಕಾನ್‌ಸ್ಟೆಬಲ್ ಶ್ರೀನಿವಾಸ್ ಮೂರ್ತಿ ಅವರನ್ನು ಸೇವೆಯಿಂದ ಅಮಾನತ್ತು ಮಾಡಲಾಗಿದೆ.

ಜಯಮಹಲ್ ಬಳಿಯ ಆರಗ ಜ್ಞಾನೇಂದ್ರ ಅವರ ಸರ್ಕಾರಿ ನಿವಾಸಕ್ಕೆ ಎಬಿವಿಪಿ ಕಾರ್ಯಕರ್ತರು ಶನಿವಾರ ಬೆಳಿಗ್ಗೆ ಮುತ್ತಿಗೆ ಹಾಕಿದ್ದರು.

ತ್ವರಿತ ಕ್ರಮ ಕೈಗೊಳ್ಳಬೇಕಾದ ಪಿಎಸ್ಐ ಹಾಗೂ ಹೆಡ್ ಕಾನ್‌ಸ್ಟೇಬಲ್ ಕರ್ತವ್ಯಲೋಪ ಎಸಗಿದ್ದರು ಎಂದು ಕ್ರಮ ತೆಗೆದುಕೊಳ್ಳಲಾಗಿದೆ.


HAPPY RETIREMENT LIFE



ನಿವೃತ್ತ ಜೀವನಕ್ಕೆ ಕಾಲಿಡುತ್ತಿರುವ ಬಾಪೂಜಿ ಪಾಲಿಟೆಕ್ನಿಕ್ ಸಿವಿಲ್ ವಿಭಾಗದ ಹೆಚ್.ಓ.ಡಿ

ಶ್ರೀಯುತ

ಕೆ.ಎನ್. ಮಂಜುನಾಥ

ರವರ ನಿವೃತ್ತ ಜೀವನ ಸುಖಕರವಾಗಿರಲಿ ಮತ್ತು ಅವರಿಗೆ ದೇವರು ಆಯುಷ್ಯ, ಆರೋಗ್ಯ ಕರುಣಿಸಲೆಂದು ಪ್ರಾರ್ಥಿಸುತ್ತಾ ಶುಭ ಕೋರುವವರು

- ಶ್ರೀಮತಿ ಜಯ್ಯಮ್ಮ ಶ್ರೀ ನಂಜಪ್ಪ ಶರಣಪ್ಪ ಮತ್ತು ಮಕ್ಕಳು ಗ್ರಾಮ ಪಂಚಾಯತಿ ಮಾಜಿ ಅಧ್ಯಕ್ಷರು, ಕುರೇಮಾಗನಹಳ್ಳಿ.
- ಶ್ರೀಮತಿ ಚನ್ನಮ್ಮ ಶ್ರೀ ಗೌಡ್ರ ಚಂದ್ರಶೇಖರಪ್ಪ ಮತ್ತು ಮಕ್ಕಳು ಕೃಷಿಕರು, ಸಿದ್ದನೂರು.
- ಲಿಂಗೈಕ್ಯ ಶ್ರೀ ಕೆ.ಎಂ ಕೊಟ್ರೇಶಪ್ಪ ಮತ್ತು ಮಕ್ಕಳು ಜಿಲ್ಲಾ ಪಂಚಾಯತಿ ಮಾಜಿ ಸದಸ್ಯರು ಬಿ.ಕಲಪನಹಳ್ಳಿ.
- ಲಿಂಗೈಕ್ಯ ಶ್ರೀ ಜಿ.ವಿ ಸಿದ್ದಪ್ಪ ಶ್ರೀಮತಿ ಸುಶೀಲಮ್ಮ ಮತ್ತು ಮಕ್ಕಳು ಮಾಜಿ ಶಾಸಕರು, ಅರಸಿಕೆರೆ ಹಾಸನ ಜಿಲ್ಲೆ.
- ಶ್ರೀಮತಿ ವಿಮಲ ಶ್ರೀ ಕೆ.ಎಂ. ಬಸವರಾಜಪ್ಪ ಮತ್ತು ಮಕ್ಕಳು ವರ್ತಕರು, ದಾವಣಗೆರೆ.
- ಶ್ರೀಮತಿ ಉಮಾ ಶ್ರೀ ಕೆ.ಎನ್ ಸೋಮಶೇಖರಪ್ಪ ಮತ್ತು ಮಕ್ಕಳು ನಿರ್ದೇಶಕರು, ಶಿವಮೊಗ್ಗ-ದಾವಣಗೆರೆ-ಚಿತ್ರದುರ್ಗ ಹಾಲು ಒಕ್ಕೂಟ, ಬಿ.ಕಲಪನಹಳ್ಳಿ.
- ಶ್ರೀಮತಿ ರತ್ನಮ್ಮ ಶ್ರೀ ಬುಳ್ಳಾಪುರದ ನಾಗೇಂದ್ರಪ್ಪ ಮತ್ತು ಮಕ್ಕಳು ಕೃಷಿಕರು, ರಾಗಿಮಸಲವಾಡ.
- ಶ್ರೀಮತಿ ಗಿರಿಜಮ್ಮ ಶ್ರೀ ತುಪ್ಪದಹಳ್ಳಿ ಬಸವರಾಜಪ್ಪ ಮತ್ತು ಮಕ್ಕಳು ಮ್ಯಾನೇಜರ್, ಅರಣ್ಯ ಇಲಾಖೆ, ದಾವಣಗೆರೆ.
- ಶ್ರೀಮತಿ ಮಂಗಳ ಶ್ರೀ ಕೆ.ಎಸ್. ರೇವಣಸಿದ್ದಪ್ಪ ನಿವೃತ್ತ ಪಬ್ಲಿಕ್ ಪ್ರಾಸಿಕ್ಯೂಟರ್ ಮತ್ತು ಮಕ್ಕಳು, ದಾವಣಗೆರೆ.
- ಶ್ರೀಮತಿ ಲಲಿತ ಶ್ರೀ ಕೆ.ಎಂ ಲಿಂಗರಾಜು ಮತ್ತು ಮಕ್ಕಳು ಕೃಷಿಕರು, ಬಿ.ಕಲಪನಹಳ್ಳಿ, ದಾವಣಗೆರೆ
- ಶ್ರೀಮತಿ ಮಂಜುಳ ಶ್ರೀ ಹಳ್ಳಿಗೌಡ್ರ ಬಸವರಾಜಪ್ಪ ಮತ್ತು ಮಕ್ಕಳು ಕೃಷಿಕರು, ಎಲೆಬೇತೂರು.

ವರಮಹಾಲಕ್ಷ್ಮಿ ಹಬ್ಬದ ಪ್ರಯುಕ್ತ ಬಂಪರ್ ಆಫರ್

ಗ್ರಾಹಕರ ಸೇವೆಯನ್ನೇ ಮುಖ್ಯ ಗುರಿಯನ್ನಾಗಿಸಿಕೊಂಡಿರುವ

ನಿಮ್ಮ 'ರವಿತೇಜ' ದಲ್ಲಿ

10% OFF + 10% OFF

ಎಲ್ಲಾ ಬಟ್ಟೆಗಳ ಮೇಲೆ...

50% OFF

ಆಯ್ದ ಬಟ್ಟೆಗಳ ಮೇಲೆ ...



ಕೆಲವೇ ದಿನಗಳು ಮಾತ್ರ

ಇಂದೇ ಭೇಟಿ ಕೊಡಿ...

Raviteja Textiles

Silk Sarees | Mens Wear | Kids Wear

Raviteja Garments
Chamarajpet Ph. : 98800 32999

Raviteja's
Vidyanagar Ph. : 98803 82611

Raviteja Fashion
Chetana Hotel Road, Ph. : 95916 33871

Raviteja Silks & Sarees
Vijayalakshmi Road, Ph. : 98444 66844, 97419 53993

WANTED ACCOUNTANT

QUALIFICATION : B.Com., M.Com with Tally Knowledge

No. of Posts : 2

Experience: Minimum 2 Years in Manufacturing Sector

WALK IN INTERVIEW

DATE - 02/08/2022

Send Your Profile to msipl.hr@live.com

MAHARAJ SOAPS INDUSTRY PVT. LTD.,

No. 768/500, Lokikere Main Road, Near Industrial Area, Davangere. Ph : 08192-262826 www.msiplgroup.com

M : 9964296297, 9945598998

ಬೇಕಾಗಿದ್ದಾರೆ

ನಮ್ಮ ಶೋ ರೂಂನಲ್ಲಿ ಸೇಲ್ಸ್ ಮಾಡಲು ಅನುಭವವುಳ್ಳ ಸೇಲ್ಸ್ ಬಾಯ್ಸ್ ಮತ್ತು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ.

ಸೂಕ್ತ ಪರಿಚಯದೊಂದಿಗೆ ಸಂಪರ್ಕಿಸಿ :

ಶಾಂತಲಾ ವೆಡ್ಡಿಂಗ್ ಮಾಲ್

96861 95327
ಚಾಮರಾಜಪೇಟೆ, ದಾವಣಗೆರೆ - 577 001.

KJS ಬೇಕಾಗಿದ್ದಾರೆ

ಕುಮಾರ್ ಜ್ಯೂಯಲರ್ಸ್‌ನಲ್ಲಿ ಕೆಲಸ ಮಾಡಲು ಅನುಭವವುಳ್ಳ ಸೇಲ್ಸ್‌ಮ್ಯಾನ್ ಮತ್ತು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ. ವಸತಿ ಮತ್ತು ಊಟದ ವ್ಯವಸ್ಥೆ ಇರುತ್ತದೆ. ಸೂಕ್ತ ಪರಿಚಯಸ್ಥರೊಂದಿಗೆ ಸಂಪರ್ಕಿಸಿ.

ಕುಮಾರ್ ಜ್ಯೂಯಲರ್ಸ್, ಮಂಡಿಪೇಟೆ, ದಾವಣಗೆರೆ.
75369 16916, 88612 05481

|| ಶ್ರೀ ವಿಠ್ಠಲ ರುಕುಮಾಯಿ ಪ್ರಸನ್ನ || || ಶ್ರೀ ತುಳಜ ಭವಾನಿ ಪ್ರಸನ್ನ ||

'ಬೊಂಗಾಳೆ ಹಾಸ್ಪಿಟಲ್' ಉದ್ಘಾಟನಾ ಸಮಾರಂಭ

Opening Ceremony "Bongale Hospital

3rd Main, J.C. Extension, Harihar, Ph. : 9964022996




ಶ್ರೀಮತಿ ರುಕ್ಮಿಣಿ ಬಾಯಿ
ಶ್ರೀ ತುಕಾರಮ್ ರಾವ್ ಬೊಂಗಾಳೆ
ಅವರ ಆಶೀರ್ವಾದೊಂದಿಗೆ
ಶ್ರೀಮತಿ ಶಕುಂತಲ, ಶ್ರೀ ಸದಾಶಿವ ಬೊಂಗಾಳೆ
ಹಾಗೂ ಸಹೋದರರು, ಹರಿಹರ.

ನಮ್ಮ ನೂತನ 'ಬೊಂಗಾಳೆ ಹಾಸ್ಪಿಟಲ್'

ಉದ್ಘಾಟನಾ ಸಮಾರಂಭಕ್ಕೆ
ತಮ್ಮನ್ನು ಆತ್ಮೀಯವಾಗಿ ಆಹ್ವಾನಿಸುತ್ತಿದ್ದೇವೆ.

ದಿನಾಂಕ : 31.07 2022ರ ಭಾನುವಾರ
ಪೂಜೆ : ಬೆಳಿಗ್ಗೆ 11.00 ಗಂಟೆಗೆ
ಭೋಜನ : ಮಧ್ಯಾಹ್ನ 12.30ಕ್ಕೆ
ಸ್ಥಳ : ಅಂಬೇಡ್ಕರ್ ಭವನ, 3ನೇ ಮೇನ್
ಜೆ.ಸಿ. ಬಡಾವಣೆ, ಹರಿಹರ.




ನಿಮ್ಮವರೇ ಆದ :
ಶ್ರೀಮತಿ ತ್ರಿಶಲ ಮತ್ತು ಡಾ|| ಸಚಿನ್ ಬೊಂಗಾಳೆ
ಶ್ರೀಮತಿ ಸಹನ ಮತ್ತು ಕಿರಣ್ ಹೊವಲ್
(ಲಂಡನ್, ಯು.ಕೆ.)

ಆದರದ ಸ್ವಾಗತ :
ಶ್ರೀಮತಿ ಪೂರ್ಣಿಮ ಮತ್ತು ಶ್ರೀ ಶೈಲೇಶ್ ಮಹೇಂದ್ರಕರ್, ಬೆಳಗಾವಿ.
ಶ್ರೀಮತಿ ಮಾಧವಿ, ಶ್ರೀ ಮಂಜುನಾಥ ಬೊಂಗಾಳೆ ಮತ್ತು ಮಕ್ಕಳು
ಶ್ರೀಮತಿ ಸುರೇಖ, ಶ್ರೀ ಅರುಣ್‌ಕುಮಾರ್ ಬೊಂಗಾಳೆ ಮತ್ತು ಮಕ್ಕಳು
ಶ್ರೀಮತಿ ಲತಾ, ಶ್ರೀ ದಿವಾಕರ್, ಪಿ. ಶಿಂಪಿ ಮತ್ತು ಮಕ್ಕಳು
ಬೇಬಿ : ಆರ್ನ ಮತ್ತು ಸ್ವರ

ಅಭಿನಂದನೆಗಳೊಂದಿಗೆ :
ಬೊಂಗಾಳೆ ಕುಟುಂಬಸ್ಥರು
ಬಂಧು-ಮಿತ್ರರು

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

FREE STITCHING




The Raymond Shop DAVANGERE: • Tulsian Plaza, Near Aruna Theater, P B Road ©9480742450
• Ground Floor, Near Bapuji Samudaya Bhavan, Shamanur Road ©9448619522


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte